# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES
KANNADA DAILY
ಕನ್ನಡ ದಿನಪತ್ರಿಕೆ

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 249 Issue: 249 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 09.04.2025 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2



Good Opportunity for Branding
1,25,000+
Digital E-PAPER READERS



No.1 HAMPI TIMES LEADING PRINT & DIGITAL District News Paper
Call Us for Advertisements: 9448633038

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ

1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು

94486 33038 hampitimes@gmail.com

ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...

ಹಂಪಿ ಟೈಮ್ಸ್ ಇ-ಪೇಪರ್

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್


## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

-: ದರ್ಶನ ಸಮಯ :-
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




## ಮೈಕ್ರೋ ನ್ಯೂಸ್

### ಏ.೦೯ ವಿದ್ಯುತ್ ವ್ಯತ್ಯಯ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-1 ರ ವ್ಯಾಪ್ತಿಯ 220/11ಕೆವಿ ಅಲ್ಲಿಪುರ್ ವಿದ್ಯುತ್ ಫೀಡರ್‌ನಲ್ಲಿ ವಿದ್ಯುತ್ ತುರ್ತು ನಿರ್ವಹಣೆ ಕಾಮಗಾರಿ ಕೈಗೊಳ್ಳುತ್ತಿರುವುರಿಂದ ಏ.09 ರಂದು ಬೆಳಿಗ್ಗ 9.30 ಗಂಟೆಯಿಂದ ಬೆಳಿಗ್ಗ 11.30 ಗಂಟೆಯವರೆಗೆ ಫೀಡರ್-76 ರ ವ್ಯಾಪ್ತಿಯ ಮೋರ್‌ಗಲ್ಲಿ, ವಟ್ಟಪ್ಪಗೆರೆ, ಕುಣಿಟಾನ ಮಸೀದಿ, ದಾನಪ್ಪ ಸ್ಟ್ರೀಟ್ ಸೇರಿದಂತೆ ಇನ್ನೂ ಮುಂತಾದ ಏರಿಯಾಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದ್ದು, ಸಾರ್ವಜನಿಕರು ಮತ್ತು ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

-: ಪ್ರಯತ್ನಿಸು :-
ನೀವು ಹಲವು ಬಾರಿ ಸೋಲಬಹುದು ಆದರೆ ನಿರಂತರ ಪ್ರಯತ್ನ ನಿಮ್ಮನ್ನು ಎಂದೂ ಸೋಲಲು ಬಿಡುವುದಿಲ್ಲ.

ಬಳ್ಳಾರಿ ಜಿಲ್ಲೆ ಪಿಯು ಶೇ.67.19 ರಿಸಲ್ಟ್ | ವಿಜಯನಗರ ಜಿಲ್ಲೆ ಪಿಯು ಶೇ.61.73 | ಒಟ್ಟು ಶೇ.64.41 ಫಲಿತಾಂಶ

# ಕಲೆಯಲ್ಲಿ ಅರಳಿದ ಸಂಜನಾ ಬಾಯಿ ಲಾರಿ ಚಾಲಕನ ಮಗಳು ರಾಜ್ಯಕ್ಕೆ ಪ್ರಥಮ

**ಸಾಮಾಜಿಕ ಜಾಲತಾಣಗಳಿಂದ ದೂರ | ವಿದ್ಯಾರ್ಥಿನಿಗೆ ಸಚಿವ- ಜಿಲ್ಲಾಧಿಕಾರಿಗಳಿಂದ ಅಭಿನಂದನೆ | ಮಗಳಿಗೆ ಸಿಹಿ ತಿನಿಸಿದ ಪಾಲಕರು**

**ಸಂಜನಾ ಬಾಯಿ ಎಲ್ ಆರ್. 600ಕ್ಕೆ 597 ಅಂಕಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ | ಕೆ.ನಿರ್ಮಲಾ 596 ಅಂಕ ಪಡೆದು ರಾಜ್ಯಕ್ಕೆ ದ್ವಿತೀಯ**

■ ಹಂಪಿ ಟೈಮ್ಸ್ ಹೊಸಪೇಟೆ

2024-25ನೇ ಸಾಲಿನ ಪಿಯು ದ್ವಿತೀಯ ವಾರ್ಷಿಕ ಪರೀಕ್ಷೆಯಲ್ಲಿ ವಿಜಯನಗರ ಜಿಲ್ಲೆಯ ಕೊಟ್ಟೂರಿನ ಇಂದು ಪದವಿ ಪೂರ್ವ ಕಾಲೇಜಿನ ಪಿಯು ಕಲಾವಿಭಾಗದ ವಿದ್ಯಾರ್ಥಿನಿ ಸಂಜನಾ ಬಾಯಿ ಎಲ್ ಆರ್. 600ಕ್ಕೆ 597 ಅಂಕಪಡೆದು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದಾರೆ. ಇಟಗಿಯ





ಪಂಚಮಸಾಲಿ ಪದವಿಪೂರ್ವ ಕಾಲೇಜ್ ವಿದ್ಯಾರ್ಥಿನಿ ಕೆ.ನಿರ್ಮಲಾ 596 ಅಂಕ ಪಡೆಯುವ ಮೂಲಕ ರಾಜ್ಯ ಹಾಗೂ ವಿಜಯನಗರ ಜಿಲ್ಲೆಗೆ ದ್ವಿತೀಯ ಸ್ಥಾನ, ಕೊಟ್ಟೂರು ಉಜ್ಜಿನಿಯ ಎಸ್‌ಯುಜೆಎಸ್ ಪಿಯು ಕಾಲೇಜಿನ ಸುನಿತಾ ಹೆಚ್. 582 ಅಂಕ ಪಡೆದು ಜಿಲ್ಲೆಗೆ ತೃತೀಯ ಸ್ಥಾನ ಪಡೆದಿದ್ದಾರೆ.

**ವಾಣಿಜ್ಯ ವಿಭಾಗ:** ಹೊಸಪೇಟೆ ಟಿಎಂಎಇಎಸ್ ಪಿಯು ಕಾಲೇಜಿನ ಪೂರ್ವಿ ಜಿ.ಎನ್. 594 ಅಂಕ ಪಡೆದು ಜಿಲ್ಲೆಗೆ ಜಿಲ್ಲೆಗೆ ಪ್ರಥಮ, ಹಡಗಲಿ ಜಿ.ಬಿ.ಆರ್.ಪದವಿಪೂರ್ವ ಕಾಲೇಜಿನ ಐಶ್ವರ್ಯ ಡಿ 592 ಅಂಕ ಪಡೆದು ದ್ವಿತೀಯ, ಕೊಟ್ಟೂರು ಇಂದು ಪದವಿಪೂರ್ವ ಕಾಲೇಜಿನ ಎಂ.ಅಂಜಲಿ 586 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ.

**ವಿಜ್ಞಾನ ವಿಭಾಗ:** ಕೊಟ್ಟೂರಿನ ಇಂದು ಪಿಯು ಕಾಲೇಜಿನ ವಿದ್ಯಾರ್ಥಿ ಎಲ್.ಆರ್.ಆಕಾಶ್ 594 ಅಂಕ ಪಡೆದು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಹಗರಿಬೊಮ್ಮನಹಳ್ಳಿ ವಿದ್ಯಾನಿಕೇತನ ಪಿಯು ಕಾಲೇಜಿನ ವಿದ್ಯಾರ್ಥಿನಿ ಟಿ.ಸೌಂದರ್ಯ 592 ಅಂಕ ಪಡೆದು ದ್ವಿತೀಯ ಹಾಗೂ ಹೊಸಪೇಟೆಯ ಸುರಭಿ ಪಿಯು ಕಾಲೇಜಿನ ವಿದ್ಯಾರ್ಥಿನಿ ಅನನ್ಯ ಪ್ರಾಣೇಶ್ ಕುಲಕರ್ಣಿ 588 ಅಂಕ ಪಡೆದು ತೃತೀಯ ಸ್ಥಾನ ಪಡೆದಿದ್ದಾರೆ ಎಂದು ಶಾಲಾ ಶಿಕ್ಷಣ ಇಲಾಖೆಯ ಪಿಯು ಉಪನಿರ್ದೇಶಕರು ತಿಳಿಸಿದ್ದಾರೆ.

ಅಖಂಡ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯಲ್ಲಿ ವಿದ್ಯಾರ್ಥಿನಿಯರೇ ಫಲಿತಾಂಶದಲ್ಲಿ ಮೇಲುಗೈ ಸಾಧಿಸಿದ್ದಾರೆ. ಬಳ್ಳಾರಿ ಜಿಲ್ಲೆಯಲ್ಲಿ 12799 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಶೇ.56.39 ವಿದ್ಯಾರ್ಥಿಗಳು, ಶೇ.77.10 ವಿದ್ಯಾರ್ಥಿನಿಯರು ಸೇರಿ ಒಟ್ಟು ಶೇ.67.19 ಉತ್ತೀರ್ಣರಾಗಿದ್ದಾರೆ. ವಿಜಯನಗರ ಜಿಲ್ಲೆಯಲ್ಲಿ 13294 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದು, ಶೇ.51.63 ವಿದ್ಯಾರ್ಥಿಗಳು, ಶೇ.78.26 ವಿದ್ಯಾರ್ಥಿನಿಯರು ಸೇರಿ ಒಟ್ಟು ಶೇ.61.73 ಉತ್ತೀರ್ಣರಾಗಿದ್ದಾರೆ.



■ ಹಂಪಿ ಟೈಮ್ಸ್ ಹೊಸಪೇಟೆ

ಸಾಧನೆಗೈಯಲು ಬಡತನ ಅಡ್ಡಿಯಾಗದು, ಸಿರಿ-ಸಂಪತ್ತೇ ಇರಬೇಕೆಂದೇನಿಲ್ಲ ಎಂಬುದನ್ನು ಸಾಬೀತುಪಡಿಸಿರುವ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಗುಂಡಾ ಗ್ರಾಮದ ಪಿಯು ಕಲಾ ವಿಭಾಗದ ವಿದ್ಯಾರ್ಥಿನಿ ಸಂಜನಾ ಬಾಯಿ ಎಲ್.ಆರ್. 600ಕ್ಕೆ 597 ಅಂಕ ಪಡೆದು ರಾಜ್ಯಕ್ಕೆ ಪ್ರಥಮಳಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಲಾರಿ ಚಾಲಕ ಎಲ್.ಕೆ.ರಾಮಾನಾಯ್ಕ ಮತ್ತು ಗೃಹಿಣಿ ಎಲ್. ಕಾವೇರಿ ಬಾಯಿ ಅವರ ಸುಪುತ್ರಿ ಸಂಜನಾ ಬಾಯಿ ರಾಜ್ಯದ ಗಮನ ಸೆಳೆದಿದ್ದಾಳೆ. ಮಗಳ ಸಾಧನೆಗೆ ಇಡೀ ರಾಜ್ಯದ ಜನತೆ ಹಾಗೂ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಸೇರಿದಂತೆ ಅನೇಕರು ಶುಭಹಾರೈಸಿದ್ದನ್ನ ಕಂಡ ಪಾಲಕರ ಕಣ್ಣಾಲೆಗಳು ತೇವಗೊಂಡವು. ಬಡತನದಲ್ಲೇ ಓದಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಸಂಜನಾಬಾಯಿ ಪ್ರೇರಣೆಯಾಗಿದ್ದಾರೆ. ಕುಟುಂಬದಲ್ಲಿ ತಂದೆ 8ನೇ ತರಗತಿ ಓದಿದ್ದು, ತಾಯಿ ಗೃಹಿಣಿಯಾಗಿದ್ದರು. ಮಗಳ ಓದಿಗೆ ಪ್ರೋತ್ಸಾಹಿಸಿದ್ದರು. ಮಗಳು ಬಡತನಕ್ಕೆ ಬೆನ್ನುತೋರದೆ ಎದುರಿಸಿ ಮುನ್ನಡೆದಿದ್ದರ ಪರಿಣಾಮವೇ ಇಂದು ಹರ್ಷಕ್ಕೆ ಕಾರಣವಾಗಿದೆ. ವಿದ್ಯಾರ್ಥಿನಿ ಸಾಧನೆ ಮಾಡಬೇಕೆಂಬ ಛಲದೊಂದಿಗೆ ಯೋಜನೆ ರೂಪಿಸಿಕೊಂಡು, ಸಾಮಾಜಿಕ ಜಾಲತಾಣಗಳಿಂದ ದೂರವಿದ್ದು ಶಿಸ್ತಿನಿಂದ ಕೈಯಲ್ಲಿ ಪುಸ್ತಕಗಳನ್ನಿಡಿದು ವಿದ್ಯಾಭ್ಯಾಸದಲ್ಲಿ ತೊಡಗಿದ್ದರು. ಎಸ್ಸೆಸ್ಸೆಲ್ಸಿ ಶೇ.93 ರಷ್ಟು ಪಡೆದಿದ್ದ ಸಂಜನಾ ಪಿಯುನಲ್ಲಿ ರಾಜ್ಯಕ್ಕೆ ಪ್ರಥಮರಾಗಿರುವುದು ಕುಟುಂಬ ಹಾಗೂ ವಿಜಯನಗರ ಜಿಲ್ಲೆಯ ಜನರು ಹರ್ಷಗೊಂಡಿದ್ದಾರೆ.

## ಪೂರ್ವಿ ಜಿ.ಎನ್. ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ 6ನೇ ಸ್ಥಾನ, ಜಿಲ್ಲೆಗೆ ಪ್ರಥಮ

■ ಹಂಪಿ ಟೈಮ್ಸ್ ಹೊಸಪೇಟೆ

ವಾಣಿಜ್ಯ ವಿಭಾಗದಲ್ಲಿ ವಿಜಯನಗರ ಜಿಲ್ಲೆಯ ಟಿಎಂಎಇಎಸ್ ಅಕಾಡೆಮಿ ಆಫ್ ಸೈನ್ಸ್ ಅಂಡ ಕಾಮರ್ಸ್ ಕಾಲೇಜಿನ ಪೂರ್ವಿ ಜಿ.ಎನ್. 600ಕ್ಕೆ 594 ಅಂಕಪಡೆಯುವ ರಾಜ್ಯಕ್ಕೆ 6ನೇಸ್ಥಾನ ಪಡೆಯುವ ಮೂಲಕ ಹೊಸ ಇತಿಹಾಸ ಮುನ್ನಡೆ ಬರೆದಿದ್ದಾಳೆ. ಕಳೆದ ಮೂರು ವರ್ಷದ ಹಿಂದೆಯಷ್ಟೇ ಆರಂಭವಾದ ಕಾಲೇಜು ಈ ಬಾರಿ ವಾಣಿಜ್ಯ ವಿಭಾಗದಲ್ಲಿ ರಾಜ್ಯಕ್ಕೆ 6ನೇ ಸ್ಥಾನ ಪಡೆಯುವ ಮೂಲಕ ಮೈಲುಗಲ್ಲಾಗಿದೆ. ವಿಜಯನಗರ ಜಿಲ್ಲೆ ಈ ಭಾರಿ ಈ ಮೂವರು ವಿದ್ಯಾರ್ಥಿಗಳ ಸಾಧನೆಯಿಂದ ರಾಜ್ಯದ ಗಮನ ಸೆಳೆದಿದ್ದಾರೆ. ಪೂರ್ವಿ ಜಿ.ಎನ್. 600ಕ್ಕೆ 594 ಅಂಕಪಡೆಯುವ ಮೂಲಕ ಸಂಸ್ಕೃತ, ವ್ಯವಹಾರ ಶಾಸ್ತ್ರ ಮತ್ತು ಸಂಖ್ಯಾಶಾಸ್ತ್ರಗಳಲ್ಲಿ ನೂರಕ್ಕೆ ನೂರು ಅಂಕಗಳನ್ನು ಪಡೆದಿದ್ದಾರೆ ಎಂದು ಕಾಲೇಜಿನ ಆಡಳಿತ ಮಂಡಳಿ ತಿಳಿಸಿದೆ. ವಿದ್ಯಾರ್ಥಿನಿಯ ಸಾಧನೆಗೆ ಪಾಲಕರು ಕಾಲೇಜು ಆಡಳಿತ ಮಂಡಳಿ, ಸಿಬ್ಬಂದಿ ಹರ್ಷ ವ್ಯಕ್ತಪಡಿಸಿದ್ದಾರೆ.



## ಏ.೦೯ ರಂದು ಜೆಸ್ಕಾಂ ಕುಂದು ಕೊರತೆ ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ

ಬಳ್ಳಾರಿ ನಗರ ಜೆಸ್ಕಾಂ ಉಪ ವಿಭಾಗ-1 ಹಾಗೂ 2ರ ವ್ಯಾಪ್ತಿಯ ವಿದ್ಯುತ್ ಸಂಬಂಧಿಸಿದಂತೆ ಕುಂದು-ಕೊರತೆ ಇದ್ದಲ್ಲಿ ಬಗೆಹರಿಸಲು ಬಳ್ಳಾರಿ ಜೆಸ್ಕಾಂ ಕಾರ್ಯ ಮತ್ತು ಪಾಲನೆ ವೃತ್ತದ ಅಧೀಕ್ಷಕ ಅಭಿಯಂತರರ ಅಧ್ಯಕ್ಷತೆಯಲ್ಲಿ ಏ.09 ರಂದು ಬೆಳಿಗ್ಗ 11 ಗಂಟೆಗೆ ವಲಯ ಕಚೇರಿಯ ಮೊದಲ ಮಹಡಿಯಲ್ಲಿರುವ ಸಭಾಂಗಣದಲ್ಲಿ ವಿದ್ಯುತ್ ಗ್ರಾಹಕರ ಕುಂದು ಕೊರತೆಗಳ ಸಭೆ ಆಯೋಜಿಸಲಾಗಿದೆ ಎಂದು ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

# ನೀರು ಮಿತ ಬಳಕೆ ಎಲ್ಲರ ಕರ್ತವ್ಯ

**ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಎಸ್.ಕೃಷ್ಣಾನಾಯ್ಕ್ ಹೇಳಿಕೆ | ಕುಡಿಯುವ ನೀರಿನ ಅರವಟ್ಟಿಗೆಗೆ ಚಾಲನೆ**

■ ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ

ಜೀವಜಲ ಅಮೂಲ್ಯವಾದುದು ಅದನ್ನು ಮಿತವಾಗಿ ಬಳಸಿ ಮುಂದಿನ ಪೀಳಿಗೆಗೆ ಉಳಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಎಸ್. ಕೃಷ್ಣಾನಾಯ್ಕ್ ಹೇಳಿದರು.

ಪಟ್ಟಣದಲ್ಲಿ ಇತ್ತೀಚೆಗೆ ಬಸ್ ನಿಲ್ದಾಣದಲ್ಲಿ ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯೂಕೇಷನಲ್ ಟ್ರಸ್ಟ್ ಹಾಗೂ ಎಸ್.ಎಲ್.ಆರ್ ಮೆಟಾಲಿಕ್ಸ್ ಇವರ ಸಹಯೋಗದಲ್ಲಿ ಸಿ.ಎಸ್.ಆರ್ ಯೋಜನೆ ಅಡಿಯಲ್ಲಿ ಕುಡಿಯುವ ನೀರಿನ ಅರವಟ್ಟಿಗೆಗೆ ಚಾಲನೆನೀಡಿ ಮಾತನಾಡಿದರು, ಒಂದರಿಂದ ಎರಡು ದಿನಗಳ ಕಾಲ ಊಟ ಇಲ್ಲದೇ ಜೀವಿಸಬಹುದು ಆದರೆ




ನೀರು ಇಲ್ಲದೇ ಒಂದು ದಿನ ಕೂಡ ಬದುಕುಳಿಯುವುದಕ್ಕೆ ಸಾಧ್ಯವಿಲ್ಲ ಹಾಗಾಗಿ ನೀರು ಅಮೂಲ್ಯವಾಗಿದ್ದು ಜೀವ ಉಳಿಸುವ ಶಕ್ತಿ ಅದಕ್ಕೆ ಇದೆ ಪ್ರತಿಯೊಬ್ಬರು ನೀರನ್ನ ಮಿತವಾಗಿ ಬಳಸಿ ನಾವು ಮುಂದಿನ ಪೀಳಿಗಗೆ ಉಳಿಸುವ ಜವಬ್ದಾರಿ ನಮ್ಮ ಮೇಲಿದೆ ಎಂದರು.

ಎಸ್.ಎಲ್.ಆರ್ ಕಂಪನಿಯ ಮುಖ್ಯ ಅಧಿಕಾರಿ ರವಿಜೋಶಿ ಮಾತನಾಡಿ,ನಾವು ಕಳೆದ ಎರಡು ವರ್ಷಗಳಿಂದ ನಿರಂತರವಾಗಿ ಬೇಸಿಗೆ ಸಮಯದಲ್ಲಿ ಎರಡು ತಿಂಗಳ ಕಾಲ ಸಿ.ಎಸ್.ಆರ್ ಯೊಜನೆ ಅಡಿಯಲ್ಲಿ ಕುಡಿಯುವ ನೀರಿನ ಅರವಟ್ಟಿಗೆ ವ ಾಡಲಾಗುತ್ತದೆ,ಮರಿಯಮ್ಮನಹಳ್ಳಿ ಪಟ್ಟಣದಲ್ಲಿ ಪ್ರತಿ ವಾರ್ಡ್ ಗಳಿಗೆ ನೀರಿನ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದೆ,ಎರಡು ತಿಂಗಳ ಕಾಲ ಕುಡಿಯುವನೀರಿನ ಅರವ ಟ್ಟಿಗೆ ಮಾಡಲಾಗಿದೆ ನೀರನ್ನ ಮಿತವಾಗಿ ಬಳಸಿಕೊಂಡು ಇದರ ಸದುಪಯೋಗ ಪಡೆದುಕೊಳ್ಳಿ ಎಂದರು.

ಈ ಸಂದರ್ಭದಲ್ಲಿ ಚೈತನ್ಯ ಗ್ರಾಮೀಣ ಅಭಿವೃದ್ಧಿ ಎಜ್ಯೂಕೇಷನಲ್ ಟ್ರಸ್ಟ್ ನ ಅಧ್ಯಕ್ಷ ಭೀಮರಾಜ, ಪಟ್ಟಣ ಪಂಚಾಯತಿ ಇಂಜಿನಿಯರ್ ಹನುಮಂತಪ್ಪ, ಎಸ್.ಎಲ್. ಆರ್ ಕಂಪನಿಯ ಸಿ.ಎಸ್.ಆರ್ ವಿಭಾಗದ ಮಾರುತಿ ಗೋಸಂಗಿ ಮುಖಂಡರಾದ,ಕ.ರ.ವೇ.ತಾ.ಅಧ್ಯಕ್ಷ ಈ.ರಮೇಶ್, ಗರಗ ಪ್ರಕಾಶ್, ಅಶೋಕ,ಯು ಭರಮಪ್ಪ ಸೇರಿದಂತೆ ಇತರರಿದ್ದರು.


ಪ್ರಿಂಟ್ & ಡಿಜಿಟಲ್ ಸುದ್ದಿ, ಪ್ರಕಟಣೆ, ಜಾಹೀರಾತಿಗಾಗಿ ಸಂಪರ್ಕಿಸಿ
ಹಂಪಿ ಟೈಮ್ಸ್
M:9448633038

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ




ನಿಮ್ಮ ಶಾಲಾ, ಕಾಲೇಜ್ ವಿದ್ಯಾರ್ಥಿಗಳಿಗೆ / ಸಾಧಕರಿಗೆ ಅಭಿನಂದನೆ,
ನಿಮ್ಮೂರ ಜಾತ್ರೆಗೆ ಸ್ವಾಗತ/ಶುಭಾಶಯಗಳನ್ನು ನಿಮ್ಮ ಹಂಪಿ ಟೈಮ್ಸ್
ಮೂಲಕ ಶುಭ ಕೋರಲಿಚ್ಚಿಸುವವರು ಸಂಪರ್ಕಿಸಿ
Pay for Print Ads,
Get Digital Free!
CALL US NOW!
SPECIAL OFFER LIMITED TIME
ಮೊ: 9448633038
email: hampitimes@gmail.com

ಹಂಪಿ ಟೈಮ್ಸ್ HAMPI TIMES

## ಬೆಳಕಿನ ಹಾದಿ

### ಕೋಪವೆಂಬ ಕೂಪದಿಂದ ಹೊರಬರೋಣ

■ ಜಯಶ್ರೀ.ಎಂ.ಕರ್ಜಗಿ. ಹುಬ್ಬಳ್ಳಿ



ಒಂದು ಆಶ್ರಮದಲ್ಲಿ ಒಬ್ಬ ಸನ್ಯಾಸಿ ಇದ್ದ. ಆತನ ಬಳಿಗೆ ಅನೇಕರು ತಮ್ಮ ಸಮಸ್ಯೆ ಪರಿಹಾರಕ್ಕೆಂದು ಬರುತ್ತಿದ್ದರು. ಅವರು ತಮ್ಮ ಸಮಸ್ಯೆ ಹೇಳಿಕೊಂಡ ಕೂಡಲೇ ಸನ್ಯಾಸಿಗೆ ಕೋಪ ಬರುತ್ತಿತ್ತು. ಅದಕ್ಕಾಗಿ ಆತನಿಂದ ಜನರ ಸಮಸ್ಯೆಗಳಿಗೆ ಪರಿಹಾರ ಸಿಗುತ್ತಿರಲಿಲ್ಲ. ನಾನು ಹೀಗೆ ಪದೇ ಪದೇ ಕೋಪ ಮಾಡಿಕೊಳ್ಳುವುದು ಸರಿಯಲ್ಲ. ಎಲ್ಲಾದರೂ ಏಕಾಂಗಿಯಾಗಿ ಧ್ಯಾನ ಮಾಡಿ ಕೋಪವನ್ನು ನಿಗ್ರಹ ಮಾಡಿಕೊಳ್ಳಬೇಕು ಎಂದು ಒಂದು ಕಾಡಿಗೆ ಹೊರಟ. ಕಾಡಿನಲ್ಲಿ ಒಂದು ಮರದ ಕೆಳಗೆ ಕುಳಿತು ಧ್ಯಾನ ಮಾಡಲು ಪ್ರಾರಂಭಿಸಿದ. ಸ್ವಲ್ಪ ಸಮಯದ ನಂತರ ಜೋರಾದ ಶಬ್ದ ಕೇಳಿತು. ಆತನ ಧ್ಯಾನಕ್ಕೆ ಭಂಗವಾಯಿತು. ಪುನಹ ಕೋಪಗೊಂಡ. ಯಾರು ನನ್ನ ಧ್ಯಾನಕ್ಕೆ ಭಂಗ ತಂದವರು ಎಂದು ಸುತ್ತಲೂ ನೋಡಿದ. ಅಲ್ಲಿ ಯಾರೂ ಕಾಣಲಿಲ್ಲ. ಕೋಪ ಮತ್ತಷ್ಟು ಹೆಚ್ಚಾಯಿತು. ಅಲ್ಲಿ ಒಂದು ತೆಂಗಿನ ಕಾಯಿ ಉರುಳುತ್ತಿರುವುದನ್ನು ನೋಡಿದ. ಪಕ್ಕದಲ್ಲಿ ಒಂದು ತೆಂಗಿನ ಮರವಿತ್ತು. ಅದರಿಂದ ತೆಂಗಿನ ಕಾಯಿಯೊಂದು ಬಿದ್ದು, ಒಣ ಎಲೆಗಳ ಮೇಲೆ ಉರುಳುತ್ತಾ ಹೋಗಿ ಶಬ್ದವನ್ನುಂಟು ಮಾಡಿತ್ತು. ಆಗ ಸನ್ಯಾಸಿಗೆ ನಿಜ ಏನೆಂದು ಅರ್ಥವಾಯಿತು. ಸ್ವಲ್ಪ ಹೊತ್ತು ಅದೇ ವಿಷಯವಾಗಿ ಯೋಚಿಸಿದ. ಆ ಸನ್ಯಾಸಿಗೆ ಜ್ಞಾನೋದಯವಾಯಿತು. ಕೋಪವೆಂಬುದು ತನ್ನೊಳಗೇ ಇದೆಯೇ ಹೊರತು ಹೊರಗಡೆಯಿಂದ ಬರುವುದಲ್ಲ. ಹೊರಗಡೆಯ ವಸ್ತುವೊಂದು ತಾಕುವುದರಿಂದ ತನ್ನೊಳಗಿರುವ ಕೋಪ ಜಾಗೃತಗೊಳ್ಳುತ್ತದೆ ಎಂಬ ಸತ್ಯವನ್ನು ಆತ ಅರಿತುಕೊಂಡ. ನಮ್ಮೊಳಗಿನ ಕೋಪವನ್ನು ಮೊದಲು ಕಿತ್ತು ಹಾಕಿದರೆ ಮಾತ್ರ, ನಮ್ಮೆಲ್ಲಾ ಸಮಸ್ಯೆಗೆ ಪರಿಹಾರ ಸಿಗುತ್ತದೆ ಎಂಬುದನ್ನು ಕಂಡುಕೊಂಡ. ನಂತರ ಆಶ್ರಮಕ್ಕೆ ತೆರಳಿ ಜನರ ಸಮಸ್ಯೆಗಳನ್ನು ತಾಳ್ಮೆಯಿಂದ ಆಲಿಸಿ ಅವರಿಗೆ ಪರಿಹಾರ ನೀಡಿದ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತು ಎಲ್ಲರಿಗೂ ತಿಳಿದಿದೆ. ಗಾದೆಗಳು ಆಕಾರದಲ್ಲಿ ವಾಮನಂತಿದ್ದರೂ ಅರ್ಥದಲ್ಲಿ ತ್ರಿವಿಕ್ರಮನಂತೆ. ಹಾಗಾಗಿ ಕೋಪದ ಕುರಿತು ಅನೇಕ ಗಾದೆಗಳಿವೆ. "ಕೋಪ ನಮ್ಮ ಮನೆಯ ಸುಡುವುದಲ್ಲದೇ ನರೆ ಮನೆಯವರನ್ನು ಸುಡುವುದೇ" ಎಂಬುದು ಒಂದು ಗಾದೆ. ಹಾಗೆಯೇ "ಕೋಪದಲ್ಲಿ ಕೊಯ್ದ ಮೂಗು ಮತ್ತೆ ಬಂದೀತೇ?" ಎಂಬುದು ಜನಪ್ರಿಯ ಗಾದೆ. ಹೀಗೆ ಅನೇಕ ಗಾದೆಗಳು ಕೋಪದಿಂದ ಆಗುವ ಅನಾಹುತಗಳ ಬಗ್ಗೆ ನಮ್ಮನ್ನು ಎಚ್ಚರಿಸುತ್ತಲೇ ಇವೆ.

ಕೋಪ ಎಂಬುದು ಅನರ್ಥಕಾರಿ. ಕೋಪಕ್ಕೆ ಒಳಗಾದ ಮನುಷ್ಯ ತಾನು ಏನು ಮಾಡುತ್ತಿದ್ದೇನೆ ಎಂಬುದನ್ನು ಮರೆತು ಮೃಗದಂತ ವರ್ತಿಸುತ್ತಾನೆ. ಕ್ರೋಧ ಬುದ್ಧಿಯನ್ನು ತಿನ್ನುತ್ತದೆ ಎನ್ನುವ ಹಾಗೆ ಅತಿಯಾದ ಕೋಪ ಮನುಷ್ಯನ ಬುದ್ಧಿಯನ್ನು ಕೆಡಿಸುತ್ತದೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಕೋಪದಿಂದ ಬುದ್ಧಿ ನಾಶ ಎಂದಿದ್ದಾನೆ. ಅದೇರೀತಿ ಬಸವಣ್ಣನವರು 'ತನುವಿನ ಕೋಪ ತನ್ನ ಹಿರಿತನದ ಕೇಡು' ಎಂದಿದ್ದಾರೆ. ಕೋಪ ಬಂದಾಗ ಆಗುವ ಅನಾಹುತಗಳ ಬಗ್ಗೆ ಅಕ್ಕಮಹಾದೇವಿ 'ಕೋಪ ತಾಳದೇ ಸಮಾದಾನಿಯಾಗಿರಬೇಕು' ಎಂದು ಎಚ್ಚರಿಸುತ್ತಾಳೆ. ಆದರೆ ಕೆಲವು ಸನ್ನಿವೇಶಗಳನ್ನು ಎದುರಿಸಲು ಸಾತ್ವಿಕ ಕೋಪ ಪ್ರದರ್ಶಿಸಬೇಕಾಗುತ್ತದೆ. ಮಕ್ಕಳು ತಪ್ಪು ಮಾಡಿದಾಗ ಅವರನ್ನು ತಿದ್ದಿ ಬುದ್ಧಿ ಹೇಳುವಾಗ ಸಾತ್ವಿಕ ಕೋಪ ಇರಬೇಕು. ಮನಸ್ಸು ಮತ್ತು ಹೃದಯಕ್ಕೆ ಹತ್ತಿರವಾದವರು ತೋರಿಸುವ ಪ್ರೀತಿಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಸಹಿಸಿಕೊಳ್ಳುವುದಿಲ್ಲ. ಆಗ ಅವರು ತಮ್ಮ ಮನದ ನೋವನ್ನು ಕೋಪದ ಮೂಲಕ ಪ್ರದರ್ಶಿಸುತ್ತಾರೆ. ಕೋಪಿಸಿಕೊಳ್ಳುವುದು ಮನುಷ್ಯನ ಸಹಜ ಗುಣವಾದರೂ ಅತಿಯಾದ ಕೋಪ ನಮ್ಮನ್ನೇ ನಾಶ ಮಾಡುತ್ತದೆ ಎಂಬುದಕ್ಕೆ ಪುರಾಣ ಪುಣ್ಯಕತೆಗಳೇ ಸಾಕ್ಷಿಯಾಗಿವೆ. ಹಾಗಾಗಿ ಆದಷ್ಟು ಕೋಪವನ್ನು ಕಡಿಮೆ ಮಾಡಿಕೊಂಡು ಸಮಾದಾನಿಗಳಾಗೋಣ.

# ಸೋಲು ಇರದೇ ಗೆಲುವು ಎಂದು ಕಾಣದು



ನಮ್ಮ ಮಗನನ್ನು ಬೇರೊಬ್ಬರೊಂದಿಗೆ ಆಟವಾಡಲು ಬಿಡೋದೇ ಇಲ್ಲ. ಯಾಕಂದ್ರೆ ಸೋತರೆ ಅವನು ಅಳಲು ಶುರು ಮಾಡುತ್ತಾನೆ. ಆಗ ನಿಭಾಯಿಸುವುದು ಕಷ್ಟವಾಗುತ್ತದೆ' ಒಬ್ಬ ತಾಯಿ ತನ್ನ ಮಗನ ಬಗ್ಗೆ ಪಕ್ಕದವರಲ್ಲಿ ಹೇಳಿಕೊಳ್ಳುತ್ತಿದ್ದ ಮಾತಿದು. ಅನೇಕ ಕುಟುಂಬಗಳಲ್ಲಿ ತಂದೆತಾಯಿಗಳು ಮಕ್ಕಳೊಂದಿಗೆ ಯಾವುದೇ ಆಟ ಆಡುವಾಗ ತಾವೇ ಸೋತಂತೆ ನಟಿಸಿ ಬಿಡುತ್ತಾರೆ. ಮಕ್ಕಳನ್ನು ಉತ್ತೇಜಿಸಲು ಇದೊಂದು ಮಾರ್ಗವೆಂದು ಕಂಡರೂ ಕ್ರಮೇಣ ಅವರ ಗಮನ ಗೆಲುವಿನ ಕಡೆಗೆ ಹೆಚ್ಚು ಜಾಗ್ರತವಾಗುತ್ತದೆ. ಬೇರೆ ಮಕ್ಕಳೊಂದಿಗೆ ತಮ್ಮ ಮಗನೂ ಆಟವಾಡುತ್ತಾ ಎನನ್ನೋ ಕಂಪ್ಲೆಂಟ್ ತಂದಾಗ ನಮ್ಮ ಮಗ ಮಾಡಿದ್ದು ತಪ್ಪು ಅಂತ ಗೊತ್ತಿದ್ದರೂ 'ಅವನು ಮಾಡಿದ್ದು ಎನೇನೂ ಸರಿ ಇಲ್ಲ. ನಿನ್ನದೇನೂ ತಪ್ಪಿಲ್ಲ. ಇನ್ನೊಂದು ಸಾರಿ ಅವನನ್ನು ಮಾತನಾಡಿಸಬೇಡ ಸುಮ್ಮನಿರು' ಎಂದು ಸಮಾಧಾನಿಸುತ್ತೇವೆ. ಮಕ್ಕಳನ್ನು ರಮಿಸುವ ಭರದಲ್ಲಿ ಸರಿಯನ್ನು ತಪ್ಪೆಂದು ಸಮರ್ಥಿಸಿ ಬಿಡುತ್ತೇವೆ. ಆ ತಪ್ಪಿನ ಮೆಟ್ಟಿಲ ಮೇಲೆ ಅವನ ಸವಾರಿ ಸಾಗುತ್ತದೆ. ಮಕ್ಕಳು ಕೆಟ್ಟವರಾಗಲು, ಅಸಹನೀಯರಾಗಲು, ಅಡ್ಡದಾರಿ ಹಿಡಿಯಲು ಪರೋಕ್ಷವಾಗಿ ನಾವೇ ಕಾರಣ ಆಗುತ್ತೇವೆ.

ನಮ್ಮ ಧಡ್ಡತನದಿಂದ ಸದಾ ಗೆಲುವಿನ ಮೆಟ್ಟಿಲನ್ನು ಏರಿ ಬರುವ ಮಕ್ಕಳು ಒಂದೊಮ್ಮೆ ಸೋಲನ್ನು ಕಂಡು ಬಿಟ್ಟರೆ ಮುಂದುವರೆಯುವ ಸ್ಥೈರ್ಯ ಕುಸಿಯುತ್ತದೆ. ಅದನ್ನು ಹಗುರವಾಗಿ ಸ್ವೀಕರಿಸುವದೇ ಇಲ್ಲ. ಎನೋ ಆಗಬಾರದ್ದು ಆಗಿ ಹೋಯಿತು, ತಮ್ಮ ಅಸ್ತಿತ್ವವೇ ನಾಶವಾಗಿ ಹೋಯಿತು ಎಂದು ಗೊಂದಲಕ್ಕೆ ಸಿಲುಕುತ್ತಾರೆ. ಇದು ಅವರಲ್ಲಿ ಮುನ್ನಡೆಯುವ ಸ್ವಭಾವ ಕುಸಿಯುವದಲ್ಲದೇ ಮರಳಿ ಪ್ರಯತ್ನಕ್ಕೆ ಸಿದ್ಧನಾಗುವುದೇ ಇಲ್ಲ. ಅದನ್ನು ಅತಿಯಾಗಿ ಮನಸಿಗೆ ತಂದುಕೊಂಡು 'ನಮ್ಮಿಂದ ತಪ್ಪಾಗಿದೆ, ನಾನು ಒಳ್ಳೆಯ ಮಗನಾಗಲಿಲ್ಲ, ನನ್ನ ಅಸ್ತಿತ್ವವೇ ಮುಗಿದು ಹೋಯಿತು' ಎಂದೆಲ್ಲ ನಿರ್ಧರಿಸಿ ಮನೆ ಬಿಟ್ಟು ಹೋಗುವ, ಆತ್ಮಹತ್ಯೆಗೆ ಶರಣಾಗುವ ಸಾಧ್ಯತೆ ಇರುತ್ತದೆ. ಇದಕ್ಕೆಲ್ಲ ಪರಿಹಾರವೇನು? ಅಂತಹ ಹತಾಶ ಮಕ್ಕಳನ್ನು ಮುನ್ನಲೆಗೆ ತರುವುದು ಹೇಗೆ? ಪಾಲಕರ ಪಾತ್ರ ಇಲ್ಲಿ ಪ್ರಮುಖ. ಸೋಲು, ಅವಮಾನ, ಅಡ್ಡಿ, ಆತಂಕ ಎದುರಿಸಿ ಎದ್ದು ನಿಲ್ಲುವ ಸಾಮರ್ಥ್ಯ ಹೆಚ್ಚಿಸಬೇಕು.



ಭೋಜರಾಜ ಸೊಪ್ಪಿಮಠ
9743388911

Scan For Digital Colourful
HAMPI TIMES E-paper

* ಸಮಯ, ಸಂದರ್ಭ ಸಿಕ್ಕಾಗಲೆಲ್ಲ ಕೆಲವು ವಿಷಯ ಗಮನಕ್ಕೆ ತರಬೇಕು. ಸಚಿನ್ ಕ್ರಿಕೆಟ್‌ನಲ್ಲಿ ಎಷ್ಟು ಶತಕ ಹೊಡೆದಿದ್ದಾನೋ ಅಷ್ಟು ಬಾರಿ ಸೊನ್ನೆಗೆ ಔಟಾಗಿದ್ದಾನೆ. ಅಮೇರಿಕಾದ ಜಾನ್ ಕೆನಡಿ ಅಧ್ಯಕ್ಷರಾಗೋಕೂ ಮುಂಚೆ ಕಾರ್ಪೋರೇಟರ್ ಎಲೆಕ್ಷನ್ ಸೋತಿದ್ದರು. ಧೀರೂಬಾಯಿ ಅಂಬಾನಿ ಉದ್ಯಮಿ ಆಗೋ ಮೊದಲು ಹೊಟೆಲ್‌ನಲ್ಲಿ ಕೆಲಸಕ್ಕಿದ್ದರು. ರೇಡಿಯೋ ಸ್ಟೇಷನ್ ಮೈಸೂರು ಅನಂತಸ್ವಾಮಿಯವರನ್ನು ಗಾಯಕ ಅಂತ ಒಪ್ಪಿಕೊಂಡಿರಲಿಲ್ಲ ಎಂದೆಲ್ಲಾ ಹೇಳಿ ಅವರೂ ಅಷ್ಟು ಜನರ ಎದುರು ಸೋತು ಬಿಟ್ರೆ, ನನ್ನ ಭವಿಷ್ಯ ಮುಗಿಯಿತು, ಹೇಗೆ ಮುಖ ತೋರಿಸಲಿ, ಎಲ್ಲರೂ ಎನಂದುಕೊಂಡಾರು ಅಂತ ನಿರ್ಧಾರ ತೆಗೆದುಕೊಂಡು ಸುಮ್ಮನಿದ್ದರೆ ಇಷ್ಟು ಪ್ರಸಿದ್ಧಿ ಹೊಂದಲು ಸಾಧ್ಯ ಇತ್ತಾ? ಎಂದು ಕೇಳಿ ನೋಡಿ. ಮುಖ್ಯವಾಗಿ ಸೋಲು ತಪ್ಪಲ್ಲವೆಂಬ ಭಾವನೆ ಅವರಲ್ಲಿ ಮೂಡಿಸಿ.

* ಒಬ್ಬೊಬ್ಬರಲ್ಲಿ ಒಂದೊಂದು ಪ್ರತಿಭೆ ಇರುತ್ತದೆ. ಯಾವುದು ಅಸಮರ್ಥ ಅನಿಸುತ್ತದೆಯೋ ಮರಳಿ ಪ್ರಯತ್ನಿಸಲು ಹೇಳಿ. ಸಾಧ್ಯ ಇಲ್ಲದಾಗ ಇರುವದರಲ್ಲಿಯೇ ಟಾಪರ್ ಆಗಲು ಹೇಳಿ. ಎಲ್ಲರಿಗೂ ಎಲ್ಲಾ ವಿದ್ಯೆ ಒಲಿಯಬೇಕೆಂದೇನೂ ಇಲ್ಲ.

* ಸ್ಪರ್ಧೆಯಲ್ಲಿ ಫಸ್ಟ್ ಪ್ರೈಜ್ ಒಬ್ಬರಿಗೇ. ಇದು ಸ್ಪರ್ಧೆಯ ನಿಯಮ. ಎರಡು ಮೂರರ ಸ್ಥಾನ ಕಡಿಮೆಯೇನಲ್ಲ. ಸ್ಥಾನಕ್ಕಿಂತ ಸಾಧನೆಯ ಕಡೆಗೆ ಗಮನ ಇರುವ ಹಾಗೆ ನೋಡಿಕೊಳ್ಳಿ.

* ಪ್ರತಿಭೆ ಇದ್ದರೂ ಕೆಲವೊಮ್ಮೆ ನಿಬಂಧನೆ ಡೆಡ್‌ಲೈನ್ ಹಾಕಿ ಬಿಡುತ್ತದೆ. ಸೀಮಿತ ವಯಸ್ಸಿನ ಸ್ಪರ್ಧೆ ಇರಬಹುದು. ಅಲ್ಲಿನ ಪರಿಸ್ಥಿತಿ, ಕೆಲವೊಮ್ಮೆ ನಾವು ಯೋಚಿಸಿ ತೆಗೆದುಕೊಳ್ಳುವ ನಿರ್ಧಾರ ಇವು ಮಾನದಂಡ ಆಗುತ್ತವೆ. ವಿರೋಧ, ಅಪಮಾನ, ತಿರಸ್ಕಾರ ಕೆಲ ಬಾರಿ ಸಹಜವಾಗಿ ಎದುರಾಗುತ್ತವೆ. ಅವನ್ನು ಮೆಟ್ಟಿ ನಿಲ್ಲುವ ಸಾಮರ್ಥ್ಯವೇ ಯಶಸ್ಸಿನ ಸೋಪಾನ.

* ಯಶ ಪಡೆಯಲು ಅನೇಕ ದಾರಿ ಇವೆ. ಒಂದೊಮ್ಮೆ ಸ್ಪರ್ಧೆಯಲ್ಲಿ ಪ್ರಾಶಸ್ತ್ಯ ಸಿಗದೇ ಇರಬಹುದು. ಆದರೆ ಹೆಚ್ಚು ಜನ ತಮ್ಮನ್ನೇ ನಿರೀಕ್ಷಿಸಿದ್ದರೆ ಅದೂ ಕೂಡಾ ಗೆಲುವೇ. ಜನರ ಹೃದಯ ಗೆದ್ದಿದ್ದೇನೆ ಎಂದು ಬೀಗಬೇಕು. ಒಟ್ಟಾರೆ ಸೋಲನ್ನು ಸ್ವೀಕರಿಸುವ, ಎದುರಿಸುವ ಎದೆಗಾರಿಕೆ ಬಾಲ್ಯದಿಂದಲೇ ಬೆಳೆಯಬೇಕು. ಅದು ಪರಿಶ್ರಮಕ್ಕೆ ಬೆಲೆ ಕೊಡುತ್ತದೆ.

# ನನ್ನ ಮುದ್ದು ಮಗನೇ-ಮಗಳೇ

■ ವೀಣಾ ಹೇಮಂತಗೌಡ ಪಾಟೀಲ್ ಮುಂಡರಗಿ

ಹೀಗೊಂದು ಪತ್ರ ಬರೆಯಬೇಕು ಎಂದು ಬಹಳ ದಿನಗಳಿಂದ ಅಂದುಕೊಳ್ಳುತ್ತಿದ್ದೆನಾದರೂ ಮನದ ಮೂಲೆಯಲ್ಲಿ ಒಂದು ಅಳುಕು ಕಾಡುತ್ತಿತ್ತು.... ಏನೂ ಅರಿಯದ ನಿನಗೆ ಏನೆಲ್ಲವನ್ನು ಹೇಳಿಕೊಡಬೇಕಲ್ಲ ಎಂಬ ಭಾವ ನನ್ನನ್ನು ಹಿಂಜರಿಯುವಂತೆ ಮಾಡುತ್ತಿತ್ತು.



ದಿನಗಳದಂತೆ ಈ ಭಾವ ಹೆಪ್ಪಾಗಿ ಇನ್ನೇನು ಅವರೇ ತಿಳಿದುಕೊಳ್ಳಲಿ ಬಿಡು ಎಂಬಂತೆ ಮನಸ್ಸು ಗಟ್ಟಿಯಾಗುವ ಹೊತ್ತಿನಲ್ಲಿ ನಾನು ಹೇಳದೆ ಇನ್ನಾರು ನನ್ನ ಮಗನಿ/ಳಿಗೆ ಇಂತಹ ವಿಷಯಗಳನ್ನು ಹೇಳಬೇಕು ಎಂಬ ಮತ್ತೊಂದು ಗಟ್ಟಿ ಧ್ವನಿ ಎದೆಯಾಳದಿಂದ ಹೊರಬಂದು ನೀನು ಹೇಳಲೇಬೇಕು ಎಂದು ಒತ್ತಾಯಿಸಿದ ಪರಿಣಾಮವಾಗಿ ನಿನಗೆ ಈ ಪತ್ರ ಬರೆಯುತ್ತಿದ್ದೇನೆ.

ಹದಿಹರೆಯ ಸುಂದರ ಭಾವಗಳ, ಕಚಗುಳಿ ನೀಡುವ, ಹತ್ತು ಹಲವು ಬಣ್ಣ ಬಣ್ಣದ ಕನಸುಗಳನು ಕಟ್ಟುವ ವಯಸ್ಸು. ಕಣ್ಣಿಗೆ ಕಾಣುವ ಪ್ರತಿಯೊಂದೂ ಸುಂದರ ಎಂಬ ಭಾವ. ಎಲ್ಲರ ಕಣ್ಣ ಬಿಂದು ನಾನೇ ಎಂಬ ಸ್ಪಾಟ್ ಲೈಟ್ ಸಿಂಡ್ರೋಮನ್ನು ಹೊಂದಿರುವ ಈ ಸಮಯದಲ್ಲಿ ನನ್ನ ಮಾತುಗಳು ನಿನಗೆ ಕಹಿಯೆನಿಸಿದರೂ ಆರೋಗ್ಯಕರ ಹದಿಹರೆಯವನ್ನು ಕಳೆಯಲು ಕಹಿಯಾದ ಅಮ್ಮನ ಮಾತಿನ ಔಷಧಿಯನ್ನು ನೀನು ಗುಟುಕರಿಸುವುದೇ ಒಳಿತು. ಇರಲಿ ಪೀಠಿಕೆಯೇ ದೊಡ್ಡದಾಯಿತು. ಅಮ್ಮನ ಕೈಗೆ ಪೆನ್ನು ಸಿಕ್ಕರೆ ಇಷ್ಟೇ ಅಂದುಕೊಳ್ಳಬೇಡ..... ಅಮ್ಮ ಅಲ್ವಾ... ಇದೊಂದೇ ಕೊನೆಯ ತುತ್ತು ಎಂದು ಹೇಳುತ್ತಾ ಹೆಚ್ಚೇ ಉಣಬಡಿಸುವ ನನ್ನಂತಹ ನೂರಾರು ಸಾವಿರಾರು ಅಮ್ಮಂದಿರ ಮನದ ಭಾವಗಳನ್ನು ಮೊಗೆದು ನಿನ್ನ ಮುಂದೆ ಸುರಿಯುತ್ತೇನೆ.

ಈ ಹಿಂದೆ ಯೌವ್ವನ ಎಂದರೆ ಕಾಲೇಜು ಎಂಬಂತೆ ಇತ್ತು, ಆದರೆ ಬದಲಾದ ಕಾಲಘಟ್ಟದಲ್ಲಿ ಆರು ಏಳನೇ ತರಗತಿಗೆ ಮಕ್ಕಳು ವಿರುದ್ಧಲಿಂಗಿಯ ಆಕರ್ಷಣೆಯ ಬಲೆಗೆ ಬೀಳುತ್ತಿದ್ದಾರೆ. ಈ ಆಕರ್ಷಣೆ ದೈಹಿಕ ಹಾರ್ಮೋನುಗಳ ಸ್ರವಿಸುವಿಕೆಯ ಪರಿಣಾಮವಾದರೂ ನಿಮ್ಮ ಮಾನಸಿಕ ಗಟ್ಟಿತನ ಒರೆಗೆ ಹಚ್ಚಬೇಕಾದದ್ದು ಇಲ್ಲಿಯೇ. ವಿರುದ್ಧ ಲಿಂಗಿಯ ಗಮನ ನಿಮ್ಮೆಡೆ ಹರಿಯಲು ಆಕರ್ಷಕ ಉಡುಪುಗಳನ್ನು ಧರಿಸಿ ಬಣ್ಣ ಬಣ್ಣವಾಗಿ ಅಲಂಕರಿಸಿಕೊಂಡು ಚಂದದ ಮೊಬೈಲ್ ಹಿಡಿದು ಶೂ ಗಳನ್ನು ಟಕಟಾಯಿಸುತ್ತಾ ನಡೆಯುವುದಲ್ಲ. ಮಾತು ಮಾತಿಗೆ ಜೋರಾಗಿ ನಕ್ಕು, ಕೆದರದೆ ಹೋದರೂ ತಲೆಯ ಕೂದಲನ್ನು ಒಪ್ಪವಾಗಿಸಿದಂತೆ ತೋರುವುದಲ್ಲ.

ನಿನ್ನ ಮಾನಸಿಕ ವ್ಯಕ್ತಿತ್ವವನ್ನು ಆಕರ್ಷಕವಾಗಿ ತಿದ್ದಿಕೋ. ವಿವಿಧ ವಿಷಯಗಳ ಪರಿಜ್ಞಾನವನ್ನು ಪಡೆ. ನಿನ್ನ ಬಲಹೀನತೆಗಳನ್ನು ಗುರುತಿಸಿ ಅವುಗಳನ್ನು ಹೋಗಲಾಡಿಸಲು ಎಲ್ಲ ರೀತಿಯ ಪ್ರಯತ್ನಗಳನ್ನು ಮಾಡು. ಮನಸ್ಸಿಗೆ ಬರುವ ಎಲ್ಲಾ ಯೋಚನೆಗಳನ್ನು ಕ್ರಿಯೆಗೆ ಇಳಿಸಬೇಡ. ನಿನ್ನಲ್ಲಿರುವ ಅಭದ್ರತೆಗಳನ್ನು ಹೋಗಲಾಡಿಸಿಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತನಾ/ಳಾಗು... ಏಕಾಂತದಲ್ಲಿಯೂ ನಿನಗೆ ನೀನೇ ಜೊತೆಯಾಗಿ ಸಂತಸದಿಂದ ಇರುವುದನ್ನು ಕಲಿ.

ನೋ, ಇಲ್ಲ ಎಂದು ಪದಗಳು ಕೇವಲ ಪದಗಳಲ್ಲ ಅವು ಪರಿಪೂರ್ಣ ವಾಕ್ಯಗಳು. ನಿನಗೆ ಇಷ್ಟವಿಲ್ಲದ ಬೇಡವೆನಿಸುವ ಅನವಶ್ಯಕ ವಿಷಯಗಳಿಗೆ ನೋ ಎಂದು ಹೇಳುವುದನ್ನು ರೂಢಿಸಿಕೋ... ಯಾರದ್ದೋ ಭಿಡೆಗೆ ಅಸ್ತು ಎಂದು ನಂತರ ಪಶ್ಚಾತಾಪ ಪಡುವುದು ಬೇಡ. ಯಾರಿಗೂ ಅತಿಯಾದ ವಿವರಣೆ ನೀಡುವುದು ಬೇಡ. ನಿನಗೆ ನೀನೇ ಹಾಕಿಕೊಂಡಿರುವ ಮಿತಿಗಳನ್ನು ಬೇರೆಯವರು ತೆಗೆದುಹಾಕಲು ಪ್ರಯತ್ನಿಸಲು ಅವಕಾಶ ನೀಡಬೇಡ. ಬೇರೆಯವರು ನಿನ್ನನ್ನು ಹಗುರವಾಗಿ ನೋಡಲು ನಿನ್ನ ಕುರಿತು ಮಾತನಾಡಲು ಅವಕಾಶವೀಯಬೇಡ.

ಯಾವ್ಯಾವ ಕಾಲಕ್ಕೆ ಬದುಕಿನಲ್ಲಿ ಏನೇನು ಘಟಿಸಬೇಕೋ ಹಾಗೆಯೇ ಘಟಿಸಲು ಅವಕಾಶವಿದೆ. ವಸಂತನ ಆಗಮನಕ್ಕೆ ಮುಂಚೆ ಕೋಗಿಲೆ ಕೂಗಿದ್ದಿದೆಯೇ? ಮಾವು ಚಿಗುರೊಡೆದು ಕಾಯಿಯ ಬದಲು ಹಣ್ಣನ್ನು ಮೊದಲು ನೀಡಿದ್ದಿದೆಯೇ?

ನಾವೇ ಹಚ್ಚಿದ ಪುಟ್ಟ ಸಸಿ ಮೊದಲು ತನ್ನ ಬೇರುಗಳನ್ನು ನೆಲದಲ್ಲಿ ಆಳವಾಗಿ ಊರಿಸಿ ಗಟ್ಟಿಯಾಗಿ ನೆಲೆಯೂರಿ ನಂತರ ಗಿಡವಾಗಿ ತನ್ನ ರೆಂಬೆ ಕೊಂಬೆಗಳನ್ನು ಚಾಚಿ ವಿಶಾಲವಾಗಿ ಹರಡಿ ಕಾಯಿ, ಹೂಗಳನ್ನು ನೀಡುತ್ತದೆ ಈ ಕಾಯಿಗಳು ಹಣ್ಣಾಗಿ ಮಾಗಲು ತನ್ನದೇ ಆದ ಸಮಯ ಬೇಕು,ಅಂತೆಯೇ ಬೇಡವಾದ ಎಲೆಗಳನ್ನು ಉದುರಿಸಿ ಹೊಸ ಎಲೆಗಳು ಚಿಗುರಲು ಸ್ಥಳಾವಕಾಶ ಮಾಡಿಕೊಡುತ್ತದೆ.ಎಲ್ಲದಕ್ಕೂ ಸಮಯದ ಪ್ರಕ್ರಿಯೆ ಕಾರಣವಾಗುತ್ತದೆ.

ಇನ್ನೊಂದು ಉದಾಹರಣೆ ಹೇಳುತ್ತೇನೆ.... ತಾಯಿಯ ಹೊಟ್ಟೆಯಲ್ಲಿ ಒಡಮೂಡುವ ಭ್ರೂಣ, ತಾಯಿಯ ಬೆಚ್ಚನೆಯ ಆಸರೆಯಲ್ಲಿ ನಿರಂತರ 9 ತಿಂಗಳುಗಳ ಕಾಲ ಅಲ್ಲಿಯೇ ಬೆಳೆದು ರಕ್ತ, ಮಾಂಸ ಖಂಡಗಳನ್ನು ಒಗ್ಗೂಡಿಸಿಕೊಂಡು ದೈಹಿಕ ಅಂಗಾಂಗಗಳನ್ನು ಅಭಿವೃದ್ಧಿಪಡಿಸಿಕೊಂಡು ಈ ಪ್ರಪಂಚಕ್ಕೆ ಕಾಲಿಡುತ್ತದೆ.... ಅವಧಿಗೂ ಮುನ್ನ ಹೊರ ಬಂದರೆ ಮಗುವಿಗೆ ಅಪಾಯ ಕಟ್ಟಿಟ್ಟದ್ದು, ಸಂಕೀರ್ಣ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ ಎಂದು ವಿಜ್ಞಾನ ವಿಷಯದಲ್ಲಿ ನೀನು ಕಲಿತಿರುವೆ ಅಲ್ಲವೇ? ಈ ಹರೆಯವೂ ಅಷ್ಟೇ! ಎಂಬುದು ನಿನ್ನ ನೆನಪಿನಲ್ಲಿದ್ದರೆ ಸಾಕು.

ಆಫ್ಟರ್ ಆಲ್ ಇರುವುದೊಂದೇ ಜೀವನ ಸಾಧ್ಯವಾದಷ್ಟು ಎಂಜಾಯ್ ಮಾಡಬೇಕು ಎಂಬ ಜೊಳ್ಳು ವಾದಗಳಿಗೆ ನಿನ್ನನ್ನು ನೀನು ಈಡು ಮಾಡಿಕೊಳ್ಳಬೇಡ. ಪಾರ್ಟಿ ಮಾಡುವುದು, ಮೋಜು ಮಸ್ತಿ ಮಾಡುವುದು ಸಾಮಾಜಿಕವಾಗಿ ಎಲ್ಲರೊಂದಿಗೆ ಬೆರೆಯುವುದು,ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚುಹೆಚ್ಚು ತೊಡಗಿಸಿಕೊಂಡು ಲೈಕ್ ಗಳನ್ನು ಕಮೆಂಟ್ ಗಳನ್ನು ಗಿಟ್ಟಿಸುವುದು ಖಂಡಿತವಾಗಿಯೂ ಬದುಕನ್ನು ಕೂಲ್ ಎಂದು ಭಾವಿಸುವುದು ಬದುಕಲ್ಲ.

ಹದಿಹರೆಯದ ಮೋಜಿನ ಪರಿಕಲ್ಪನೆ ಪುಸ್ತಕಗಳಲ್ಲಿ ನಿನ್ನನ್ನು ನೀನು ಕಂಡುಕೊಳ್ಳುವುದಾಗಿರಬಹುದು, ಮೆಲುವಾದ ಸಂಗೀತದಲ್ಲಿ ಮುಳುಗುವುದಿರಬಹುದು, ಚಿತ್ರ ಬಿಡಿಸುತ್ತಾ ಬಣ್ಣಗಳ ಲೋಕದಲ್ಲಿ ತೇಲುವುದಿರಬಹುದು, ಆಪ್ತರೊಂದಿಗಿನ ನಡಿಗೆ, ಟಚಿಣಣ ಕತೆ ಹೀಗೆ ವಿಭಿನ್ನ ವಿಷಯಗಳಾಗಿರಬಹುದು ಎಂಬ ಪರಿಕಲ್ಪನೆ ನಿನಗಿರಲಿ. ನಿಜ ಇತರರು ಹೇಳುವ ಮೋಜು ಮಜಾದಲ್ಲಿ ನಿನ್ನನ್ನು ನೀನು ಕಳೆದುಕೊಂಡು ಬಿಡುವ ಸಾಧ್ಯತೆಗಳು ಹೆಚ್ಚಾಗಿದ್ದರೆ, ನಿನ್ನೊಂದಿಗಿನ ನಿನ್ನ ಸಾಂಗತ್ಯದಲ್ಲಿ ನಿನ್ನೊಳಗಿನ ಅಂತರಾತ್ಮವೆಂಬ ಆಪ್ತ ಸಖನನ್ನು ನೀನು ಖಂಡಿತವಾಗಿಯೂ ಪಡೆದುಕೊಳ್ಳಬಹುದು. ಒಟ್ಟಿನಲ್ಲಿ ಮೋಜು ನಿನ್ನದೇ ಪರಿಭಾಷೆಯಾಗಿ ಇರಬೇಕೆ ಹೊರತು ಬೇರೆಯವರು ನಿನಗೆ ತೋರಿಸಿ ಕೊಡುವ ನೋಟದಲ್ಲಿಲ್ಲ.

ಹದಿಹರೆಯದ ಹುಚ್ಚಿನಲ್ಲಿ ಪ್ರೀತಿಯಲ್ಲಿ ಬಿದ್ದವರು ಮದುವೆಯಾಗಿ ಗೆದ್ದರೆ ಸಾಲದು.... ಮದುವೆಯ ನಂತರದ ದಾಂಪತ್ಯದ ಎಲ್ಲಾ ಏಳು ಬೀಳುಗಳಲ್ಲಿ ಜೊತೆಯಾಗಿರಬೇಕು. ಪ್ರೀತಿಯೇ ಎಲ್ಲವೂ ಅಲ್ಲ. ಮದುವೆಯಾಗಲು ಕೇವಲ ಪ್ರೀತಿಯೊಂದೇ ಇದ್ದರೆ ಖಂಡಿತವಾಗಿಯೂ ಸಾಲದು.

ಸಂಗಾತಿಯಾಗುವವರ ಜೊತೆಗೆ ನಿಮ್ಮಿಬ್ಬರ ಆರ್ಥಿಕ ಸಹಭಾಗಿತ್ವ, ಆಸೆ ಆಕಾಂಕ್ಷೆಗಳ ಹೊಂದಾಣಿಕೆ, ವೃತ್ತಿ ಜೀವನ ಮದುವೆ ಮಕ್ಕಳು ಮನೋ ದೈಹಿಕ ಆರೋಗ್ಯ ಮತ್ತು ತೊಂದರೆಗಳ ಕುರಿತು ತಿಳುವಳಿಕೆ ಮುಂದಿನ ಬದುಕಿನ ಕುರಿತಾದ ನಿಮ್ಮ ನಿರೀಕ್ಷೆಗಳ ಸ್ಪಷ್ಟತೆಯ ಕುರಿತು ವಿಚಾರ ವಿನಿಮಯಗಳಾಗಬೇಕು.

ದಾಂಪತ್ಯ ಎನ್ನುವುದು ಸುದೀರ್ಘ ಕಾಲದ, ಬದುಕಿನ ಕೊನೆಯವರೆಗೂ ಇರುವ ಒಡನಾಟ ಎಂಬ ಅರಿವು ನಿನಗಿರಬೇಕು.ಸುಖದಲ್ಲಿ ಎಲ್ಲರೂ ಸ್ನೇಹಿತರೆ?! ಆದರೆ ಕಷ್ಟದಲ್ಲಿ ನಿಮಗೆ ಜೊತೆಯಾಗುವ, ಪಾಲು ಗಾರರಾಗುವ, ಸಾಂತ್ವನ ನೀಡುವ ಒಡನಾಡಿ ನಿನಗೆ ಬೇಕು ಎಂಬುದು ನೆನಪಿನಲ್ಲಿರಲಿ.

ನಿಮ್ಮ ವಯಸ್ಸಿನ 15 ರಿಂದ 30 ವರ್ಷಗಳು ನಿಮ್ಮ ಬದುಕಿನ ಸುವರ್ಣ ಯುಗ ಎಂದೇ ಹೇಳಬಹುದು.

ಈ ಸಮಯದಲ್ಲಿ ನೀವು ಸ್ನೇಹಿತರನ್ನು ಮಾಡಿಕೊಳ್ಳುತ್ತೀರಿ ಮತ್ತು ಕಳೆದುಕೊಳ್ಳುತ್ತೀರಿ ಕೂಡ. ತಪ್ಪುಗಳನ್ನು ಮಾಡುತ್ತೀರಿ ಮತ್ತು ಅವುಗಳನ್ನು ಸರಿಪಡಿಸಿಕೊಳ್ಳುತ್ತೀರಿ ಕೂಡ. ಜೀವನದ ಏಳು ಬೀಳುಗಳಲ್ಲಿ ತುಂಗಾಡುತ್ತೀರಿ ತಪ್ಪುಗಳಿಂದ ಪಾಠ ಕಲಿಯುತ್ತೀರಿ... ಬದುಕಿನ ವಾಸ್ತವತೆಗಳ ಅರಿವನ್ನು ಮೂಡಿಸಿಕೊಳ್ಳುತ್ತೀರಿ. ಪ್ರೀತಿಸುತ್ತೀರಿ... ಪ್ರೇಮ ಸಾಫಲ್ಯ/ವೈಫಲ್ಯವನ್ನು ಕೂಡ ಕಾಣುತ್ತೀರಿ. ನಿಜ ಹೇಳಬೇಕೆಂದರೆ ಬಹಳಷ್ಟು ಕಳೆದುಕೊಂಡು,ಕೆಲವನ್ನು ಪಡೆದುಕೊಂಡು ಬದುಕಿನ ಬೆಂಕಿಯಲ್ಲಿ ಬಿದ್ದು ಕಶ್ಮಲಗಳನ್ನು ಕಳೆದುಕೊಂಡ ಅಪರಂಜಿ ಚಿನ್ನ ನೀವಾಗುತ್ತೀರಿ.

ಬದುಕಿನ ಈ ಎಲ್ಲ ಅನುಭವಗಳನ್ನು ನೀವು ನಿಮ್ಮ ಮುಂದಿನ ಪೀಳಿಗೆಗೆ ಹೇಳುವಾಗ ನಿಮ್ಮ ಕಂಗಳಲ್ಲಿ ಹೊಳಪಿರಬೇಕೆ ಹೊರತು ಪಶ್ಚಾತ್ತಾಪದ ಭಾವವಲ್ಲ ಎಂಬುದು ಸದಾ ನೆನಪಿನಲ್ಲಿರಲಿ.

ಪತ್ರ ತುಸು ದೊಡ್ಡದೇ ಆಗಿದೆ ನಿಜ ಆದರೆ ಈ ಪತ್ರವನ್ನು ಬರೆದ ನನ್ನ ಮನಸ್ಸು ನಿರಾಳವಾಗಿದೆ. ನೀನು ಇಡೀ ಪತ್ರವನ್ನು ಓದಿ ಅದರ ಸಾರವನ್ನು ಅರ್ಥೈಸಿಕೊಂಡರೆ ನಾನು ಈ ಪತ್ರ ಬರೆದದ್ದಕ್ಕೂ ಸಾರ್ಥಕ.

– ಇಂತಿ ನಿನ್ನ ಅಮ್ಮ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–

ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ನಿನ್ನ ಆಯ್ಕೆ ಏನು?

ಅಪ್ಪ ಅಮ್ಮರ ಕನಸುಗಳನು ನೀನೇ ಹೊತ್ತು
ಸಾಗುವೆಯ ಸಮಾಜದಿಂದ ಹೇರಲ್ಪಟ್ಟ
ಕನಸು ಹೊತ್ತು ಸಾಗುವೆಯಾ
ಅಪ್ಪ ಹೇಳ್ತಾನೆ arts ಮಾಡು ಅಂತ ಅಮ್ಮ
ಹೇಳ್ತಾಳೆ science ಮಾಡು ಅಂತ
ಹಾಗಾದ್ರೆ ನಿನ್ನ ಆಯ್ಕೆ ಏನು?

ಆಯಿತು ನಿನ್ನ ವಿದ್ಯಾಭ್ಯಾಸ ಮುಂದೆ
ನಿನ್ನದೇನೊ ನಿನ್ನದೆಯಾದ ಕನಸ್ಸುಗಳುನೂ
ನಿಂಗೆ ಇದೆಯೇನೊ?
ಅಮ್ಮ ಟೀಚರ್ ಆದ್ರೆ, ಅಪ್ಪ ಡಾಕ್ಟರ್
ಹಾಗಾದ್ರೆ ನಿನ್ನ ಆಯ್ಕೆ ಏನು?

ಸಮಾಜ ಕಟ್ಟಿ ಕೊಟ್ಟದ್ದಲ್ಲ ಸಮಾಜವನ್ನು
ನೀನೆ ಕಟ್ಟು । ಕನಸ್ಸುಗಳನ್ನು ಎರವಲು
ಪಡೆಯದೆ ಸ್ವತಃ ನೀನೆ ಎಣೆಯೊ ।
Art's, science, commerce
ಅಷ್ಟೇ ನಾ?
ಹಾಗಾದ್ರೆ ನಿನ್ನ ಆಯ್ಕೆ ಏನು?

ನಿಜವಾದ ನಿನ್ನ ಸಾಮರ್ಥ ಆಗಬಾರದೊ
ವ್ಯರ್ಥ ।
ಅರಿತುಕೊ ನಿನ್ನ ಶಕ್ತಿ ಅದುವೆ ನಿನ್ನಯ
ಯುಕ್ತಿ ।
ಉದ್ಯೋಗಂ ಪುರುಷ ಲಕ್ಷಣಂ ಮೀರ
ಬೇಕಿದೆ ಎಲ್ಲೆಗಳನ್ನು ದಾಟಬೇಕಿದೆ
ಗಡಿಗಳನ್ನು ॥

ಎತ್ತಬೇಕಿದೆ ಕೈಗಳನ್ನು । ಕೂಗಬೇಕಿದೆ
ಘೋಷಣೆಯನ್ನು ॥
ನನ್ನ ವೃತ್ತಿ ॥, ನನ್ನ ಆಯ್ಕೆ । ನನ್ನ ಕನಸ್ಸು ॥
ನನ್ನ ಹಕ್ಕು

– ಪಿ ಮುಬೀನಾ ಹೊಸಪೇಟೆ

### ಅಪ್ರತಿಮ ಶ್ರೀರಾಮ

ಅಂತರ್ ಬಾಹ್ಯ ಅಂದ ಚಂದದಿ
ಅಪ್ರಮೇಯನು ನೀ ಶ್ರೀರಾಮ!
ಇಹ–ಪರಲೋಕದಿ ಸಾಕ್ಷಾತ್ಕಾರಕ
ದಿವ್ಯ ಸ್ಫೂರ್ತಿಯು ನಿನ್ನ ನಾಮ!!

ನೋವಲಿ ನಲಿವ ಕಾಣುವಭಾವ
ತಂದಿತು ನಿನ್ನಯ ಪ್ರಿಯನಾಮ!
ನಲಿವಲೂ ನೋವ ರಮಿಸುವ ಶಕ್ತಿ
ನಮಗಿತ್ತವ ನೀನೇ ಓ ಶಾಮ!!

ನಿನ್ನ ನಾಮವ ಜಪಿಸಿ, ಸೇವೇಗೈದು
ಅಮರನಾಗಿರುವನು ಶ್ರೀ ಹನುಮ!
ನಿನ್ನಾದರ್ಶವ ಅರಿತು ನಡೆದರೆ ಜನ
ಪರಮ ಪಾವನ ನರ ಜನುಮ!!

ನೀಹುಟ್ಟಿ ನಡೆದ ಈ ಭೂಮಿಯಲ್ಲಿ
ಪುಣ್ಯದ ಪರಿಮಳ ಕಣಕಣದಲ್ಲಿ!
ಅಪ್ರತಿಮ ಅತೀತ ಕರುಣಾಮಯೀ
ನೀನೇ ರಾಮ ಪ್ರತಿ ಯುಗದಲ್ಲಿ!!

– ಶಿವರಾಜ್ ವಿ. ಶಿಕ್ಷಕರು,
ಹೊಸಪೇಟೆ.

### ಬದುಕು

ಬರೆದು ಆದ ಮೇಲೆ ಅಳಿಸಲಾಗದು
ಬೆಳುಗು ಬಾನ ಬಣ್ಣ
ಹೋದ ಕ್ಷಣಗಳು ಮತ್ತೆ ಬಾರದು
ತಿಳಿದು ಬದಕು ಜಾಣ

ಸಹ್ಯಾದ್ರಿ ಮಲೆಗೆ ಮಳೆ ಮೋಡ ಸೆಲೆಗೆ
ಭೂಮಿ ಒಂದೇ ಖಾಲಿ ಚೆಕ್ಕು
ಛಲ ಇದ್ದ ಮೇಲೆ ಗುರಿ ಮುಟ್ಟಿ ತಲುಪು
ಬದುಕೊಂದೇ ನಿನ್ನ ಹಕ್ಕು

ಬೋಳು ಮರದ ಆ ಕ್ರಾಂತಿ ಕೊಂಡದಲಿ
ಸಿಲುಕ್ಯಾವ ಹಲವು ಹಕ್ಕಿ
ಮರ ಅಪ್ಪಿ ಬೆಳೆದ ಬಳ್ಳಿಯ ಹೂವು
ನಕ್ಕಾವ ತಿನುಕಿ ತಿನುಕಿ

ಒಡಲು ಮಾರಿಗೆ ಕಡಲು ಹೊಡೆತೆಕ್ಕೆ
ಸೋರದಿರಲಿ ಕನಸು
ಆ ಕಣ್ಣ ಕುಣಿಕೆಯಲಿ ಕಲ್ಪನೆ ಕರಿಗಿ
ಸೋಲದಿರಲಿ ಮನುಸು

ಬದುಕೊಂದು ಗುಟ್ಟು ಬೆಟ್ಟದ ಹೂವು
ನಗುತಿರಲಿ ಹಾಗೆ ಹಾಗೆ
ಬೆಳಕಾದ ಮೇಲೆ ಬೆಳಕಿರುವ ತನಕ
ನೀ ಆಗು ಜಗಕೆ ಮನುಜ

ಮೆಚ್ಚಿದ ಶಿವನು ಮೆಚ್ಚಿರುವತನಕ
ಈ ಲೋಕವೆಲ್ಲಾ ನಾಕ
ಅನುಭಾವದ ಬದುಕು ಅನುಭವಿಸಿಬಿಡು
ನೀ ಇದ್ದು ಕೊನೆಯತನಕ

– ಜಿ. ಯರಿಸ್ವಾಮಿ, ಶಿಕ್ಷಕರು
ಸಂಕ್ಲಾಪುರ

### ಕೊಪ್ಪಳಕ್ಕೆ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಸದಸ್ಯರ ಭೇಟಿ: ಸಂವಾದದಲ್ಲಿ ಡಾ. ವಿಶಾಲ್ ಆರ್ ಹೇಳಿಕೆ

# ಸಮಗ್ರ-ಸಮತೋಲನ ಅಭಿವೃದ್ಧಿಗೆ ಆದ್ಯತೆ

**■ ಹಂಪಿ ಟೈಮ್ಸ್ ಕೊಪ್ಪಳ**

ಸಮಗ್ರ, ಸಮತೋಲನ ಅಭಿವೃದ್ಧಿಗೆ ಆದ್ಯತೆ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಸದಸ್ಯ ಕಾರ್ಯದರ್ಶಿಯೂ ಆಗಿರುವ ವಿತ್ತೀಯ ಸುಧಾರಣೆ ಮತ್ತು ಯೋಜನ ಇಲಾಖೆಯ ಸರ್ಕಾರದ ಕಾರ್ಯದರ್ಶಿ ಡಾ. ವಿಶಾಲ್.ಆರ್ ಹೇಳಿದರು.

ಅವರು ಮಂಗಳವಾರ ಕೊಪ್ಪಳ ಜಿಲ್ಲಾ ಪಂಚಾಯತ್ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ನಡೆದ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯ ಕೊಪ್ಪಳ ಜಿಲ್ಲಾ ಮಟ್ಟದ ಸಂವಾದ ಸಭೆಯಲ್ಲಿ ಮಾತನಾಡಿದರು.

ಡಾ. ಡಿ.ಎಂ.ನಂಜುಂಡಪ್ಪ ವರದಿಯು ಸುಮಾರು 22 ವರ್ಷಗಳಷ್ಟು ಹಳೆಯಾದಾಗಿರುವುದರಿಂದ ಹಾಗೂ ಕರ್ನಾಟಕದಲ್ಲಿ ಹಿಂದೆ ಇದ್ದ 175 ತಾಲ್ಲೂಕುಗಳ ಬದಲು ಪ್ರಸ್ತುತ 240 ತಾಲ್ಲೂಕುಗಳಾಗಿರುವುದರಿಂದ 2023ರ ಬೆಳಗಾವಿ ಅಧಿವೇಶನದಲ್ಲಿ ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಅದರಂತೆ ಡಾ. ಡಿ.ಎಂ ನಂಜುಂಡಪ್ಪ ವರದಿಯ ಅನುಷ್ಠಾನದಿಂದ ತಾಲ್ಲೂಕುಗಳು ಅಭಿವೃದ್ಧಿ ಹೊಂದಿರುವ ಬಗ್ಗೆ ಹಾಗೂ ಅಭಿವೃದ್ಧಿ ಹೊಂದದೆ ಇರುವ ತಾಲ್ಲೂಕುಗಳನ್ನು ಗುರುತಿಸಿ ಹೊಸದಾಗಿ ಸೂಚ್ಯಾಂಕವನ್ನು ಕಂಡು ಹಿಡಿದು ಪ್ರಾದೇಶಿಕ ಅಸಮತೋಲನವನ್ನು ನಿವಾರಣೆ ಮಾಡಲು ರಾಜ್ಯ ಸರ್ಕಾರವು ಆರ್ಥಿಕ ತಜ್ಞರಾದ ಪ್ರೊ. ಎಂ. ಗೋವಿಂದರಾವ್ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯನ್ನು ರಚಿಸಲಾಗಿದೆ ಎಂದರು.

ಪ್ರಸ್ತುತ ಸಂದರ್ಭದಲ್ಲಿ ಈಗಿನ ಕಾಲಕ್ಕೆ ಅನುಗುಣವಾಗಿ ಡಾ. ಡಿ.ಎಂ.ನಂಜುಂಡಪ್ಪ ವರದಿಯ ಪುನರ್ ವಿಮರ್ಶೆ ಮಾಡುವುದರ ಜೊತೆಗೆ ಸದ್ಯದ ಮಾನವ ಅಭಿವೃದ್ಧಿ ಸೂಚ್ಯಂಕ ಆಧರಿಸಿ ಹೊಸ ಮಾರ್ಗಸೂಚಿ ಅಥವಾ ಶಿಫಾರಸ್ಸುಗಳ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಸಮಿತಿಯು 40 ರಿಂದ 50 ಸೂಚ್ಯಂಕಗಳನ್ನು ಪಟ್ಟಿ ಮಾಡಿಕೊಂಡಿದ್ದು, ಅವುಗಳ ಆಧಾರದ ಮೇಲೆ ವಿಸ್ತೃತವಾಗಿ ಅಧ್ಯಯನ ಕೈಗೊಂಡು ಅಗತ್ಯ ಕ್ರಮಗಳನ್ನು ಸಮಿತಿಯು ಶಿಫಾರಸ್ಸು ಮಾಡಲಿದೆ. ಸರಕಾರದ ವತಿಯಿಂದ ಅನುದಾನ ಘೋಷಣೆ ಜತೆಗೆ ಖಾಸಗಿ ವಲಯಗಳಾದ ಕೈಗಾರಿಕೆ, ಆಹಾರ ಸಂಸ್ಕಾರಣೆ ಮತ್ತಿತರ ಕ್ಷೇತ್ರಗಳಿಗೆ ಯಾವ ರೀತಿಯ ಉತ್ತೇಜನ ನೀಡಬೇಕು ಎಂಬುದನ್ನು ಅರಿತುಕೊಂಡು ಆ ಅಂಶಗಳನ್ನು ವರದಿಯಲ್ಲಿ ಅಳವಡಿಸಲಾಗುವುದು. ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕದ ಅತ್ಯಂತ ಹಿಂದುಳಿದ ಪ್ರದೇಶಗಳನ್ನು ಅಭಿವೃದ್ಧಿಪಡಿಸಲು ಆದ್ಯತೆ ನೀಡಲಾಗುವುದು. ಪ್ರತಿ ಜಿಲ್ಲೆ ಹಾಗೂ ತಾಲ್ಲೂಕುಗಳಿಗೆ ಭೇಟಿ ನೀಡಿ, ಆಯಾ ಭಾಗದ ಜನರ ಸಲಹೆ ಸೂಚನೆಗಳನ್ನು ಪಡೆದುಕೊಳ್ಳಲಾಗುತ್ತಿದೆ. ಈ ಸಭೆಯಲ್ಲಿ ಸಚಿವರು, ಸಂಸದರು ಹಾಗೂ ವಿವಿಧ ಸಂಘ ಸಂಸ್ಥೆಗಳ ಮುಖಂಡರು ಭಾಗವಹಿಸಿ ತಮ್ಮ ಸಲಹೆಗಳನ್ನು



ನೀಡಿದ್ದಕ್ಕಾಗಿ ಅಭಿನಂಧನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ಸದಸ್ಯರಾದ ಎಸ್.ಟಿ ಬಾಗಲಕೋಟಿ ಅವರು ಮಾತನಾಡಿ, ಕೆಲವು ಐತಿಹಾಸಿಕ, ಭೌಗೋಳಿಕ, ಮಾನವ ನಿರ್ಮಿತ ಕಾರಣಗಳಿಂದಾಗಿ ಪ್ರದೇಶಗಳ ಅಭಿವೃದ್ಧಿ ಹಾಗೂ ಬೆಳವಣಿಗೆ ಭಿನ್ನವಾಗಿರುತ್ತದೆ. ಅಮೇರಿಕ ಇದ್ದಂತೆ ಭಾರತ ಇಲ್ಲ: ಗುಜರಾತ ಇದ್ದಂತೆ ಬಿಹಾರ ಇಲ್ಲ; ಮಂಗಳೂರು ಇದ್ದಂತೆ ಕೊಪ್ಪಳ ಇಲ್ಲ: ಗಂಗಾವತಿ ಇದ್ದಂತೆ ಯಲಬುರ್ಗಾ ಇಲ್ಲ; ಗಿಣಿಗೇರಾ ಇದ್ದಂತೆ ಬೂದಗುಂಪ ಇಲ್ಲ. ತೀವ್ರ ಅಸಮಾನತೆ ಜಟಿಲ ಹಾಗೂ ಅಸಮಾಧಾನಕರ ಪರಿಸ್ಥಿತಿಗೆ ಕಾರಣವಾಗುತ್ತದೆ. ಪ್ರಾದೇಶಿಕ ಅಸಮಾನತೆಯನ್ನು ನಿವಾರಿಸಲು ಹಲವಾರು ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯು ರಾಜ್ಯದ ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿ, ಅಲ್ಲಿಯ ಜನಪ್ರತಿನಿಧಿಗಳು, ಅಧಿಕಾರಿಗಳು, ರೈತರು, ಸಂಗ–ಸಂಸ್ಥೆಗಳು, ಇತರೆ ಮುಖಂಡರು ಹಾಗೂ ಸಾರ್ವಜನಿಕರಿಂದ ಸಲಹೆಗಳನ್ನು ಪಡೆದು ವರದಿ ಮಾಡಲಾಗುತ್ತಿದೆ ಎಂದರು.

ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕರಾದ ಬಸವರಾಜ ರಾಯರೆಡ್ಡಿ ಅವರು ಮಾತನಾಡಿ, ಹಳೆ ಮೈಸೂರು ಭಾಗದಂತೆ ನಮ್ಮ ಭಾಗ ಅಭಿವೃದ್ಧಿಯಾಗಿಲ್ಲ. ಯಾದಗಿರಿ ಜಿಲ್ಲೆ ಶಿಕ್ಷಣ ಹಾಗೂ ಮಹಿಳಾ ಸಾಕ್ಷರತೆಯಲ್ಲಿ ಬಹಳ ಹಿಂದುಳಿದ ಜಿಲ್ಲೆ. ಅದನ್ನು ಬಿಟ್ಟರೆ ಕೊಪ್ಪಳ ಜಿಲ್ಲೆ ಬರುತ್ತದೆ. ನಂಜುಂಡಪ್ಪ ವರದಿ ಬಂದ ನಂತರ ರಾಜ್ಯ ಸರ್ಕಾರ ಬೋರ್ಡ್ ರಚನೆ ಮಾಡಿತು. 371 ಜೆ ಆದ ನಂತರ ಈ ಭಾಗಕ್ಕೆ ಹೆಚ್ಚು ಹಣ ಕೊಡಲು ಅನುಕೂಲವಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಗೆ ಪ್ರತಿವರ್ಷ 5 ಸಾವಿರ ಕೋಟಿ ಹಣವನ್ನು ನೀಡಲಾಗುತ್ತಿದೆ. ನಮ್ಮ ಭಾಗ ಶಿಕ್ಷಣದಲ್ಲಿ ಬಹಳ ಹಿಂದಿದೆ ಎಂದರು.

ಕಲ್ಯಾಣ ಕರ್ನಾಟಕ ಭಾಗಕ್ಕೆ ವಿಶೇಷ ಒತ್ತು ನೀಡಬೇಕು ಈ ಭಾಗದ ಆಸ್ಪತ್ರೆಗಳಲ್ಲಿ ಕೆಲಸ ಮಾಡಲು ಡಾಕ್ಟರ್‌ಗಳು ಬರುತ್ತಿಲ್ಲ. ಅವರು ಇಲ್ಲಿ ಬಂದು ಕೆಲಸ ಮಾಡಲು ವಿಶೇಷ ಭತ್ಯಗಳ ಜೊತೆಗೆ ಇತರೆ ಸೌಲಭ್ಯಗಳನ್ನು ನೀಡಬೇಕು. ಈ ಭಾಗದಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕೆ ವಿಶೇಷ ಒತ್ತು ನೀಡಬೇಕು. ಕೃಷಿ ಕ್ಷೇತ್ರವು ಬಹಳ ಮುಖ್ಯವಾಗಿದೆ. ಆರ್ಥಿಕತೆ ಹೇಗೆ ಹೆಚ್ಚಿಸಬೇಕೆಂದು ಯೋಜನೆ ರೂಪಿಸಬೇಕು. ಕಳಪೆ ಕಾಮಗಾರಿಗಳಿಂದ ಶಾಲಾ–ಕಟ್ಟಡಗಳು ಹತ್ತು ವರ್ಷಗಳಲ್ಲಿ ಬಿದ್ದು ಹೋಗುತ್ತಿವೆ. ಆದರೆ ನಾವು ಕಲಿತ ಅಂದಿನ ಶಾಲೆಗಳು ಇನ್ನು ಇವೆ. ರಸ್ತೆಗಳು ಗುಣಮಟ್ಟದಲ್ಲಿ ಇಲ್ಲದ ಕಾರಣ ಕೆಲವೆ ವರ್ಷಗಳಲ್ಲಿ ಅವು ಹಾಳಾಗಿ ಹೋಗುತ್ತಿವೆ ಎಂದರು.

ಕೊಪ್ಪಳ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ ಮಾತನಾಡಿ, ನಂಜುಂಡಪ್ಪ ವರದಿ ನಂತರ ಇನ್ನೂ ಬಹಳಷ್ಟು ಅಭಿವೃದ್ಧಿ ಆಗಬೇಕಿದೆ. ಹಿಂದುಳಿದಿರಲು ಬಹಳಷ್ಟು ಕಾರಣಗಳು ಇವೆ. ತ್ವರಿತವಾಗಿ ಅಭಿವೃದ್ಧಿಯಾಗಬೇಕಾದರೆ ಹೆಚ್ಚಿನ ಹಣ ಕೊಡಬೇಕು. ನೀರಾವರಿ. ಶಿಕ್ಷಣಕ್ಕೆ ವಿಶೇಷ ಒತ್ತು ನೀಡಬೇಕಿದೆ. ನಮ್ಮಲ್ಲಿ ಆಸ್ಪತ್ರೆಗಳಿದ್ದರು ಅಲ್ಲಿ ಕೆಲಸ ಮಾಡಲು ಡಾಕ್ಟರಗಳು ಬರಲು ಹಿಂದೇಟು ಹಾಕುತ್ತಾರೆ ಎಂದು ಹೇಳಿದರು.

ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಮಾತನಾಡಿ, ನಮ್ಮ ಭಾಗದಲ್ಲಿ ಶಿಕ್ಷಣ ಕ್ಷೇತ್ರ ಬಹಳ ಹಿಂದುಳಿದಿದೆ. 7 ಸಾವಿರ ಮಕ್ಕಳಿಗೆ ಕನ್ನಡ ಓದಲು ಬರೆಯಲು ಬರುವದಿಲ್ಲ. ಅವರು ಎಸ್.ಎಸ್.ಎಲ್.ಸಿ ವರೆಗೆ ಹೇಗೆ ಬಂದರು ಎಂದು ಆಶ್ಚರ್ಯ ಆಗುತ್ತದೆ. ಅಪೌಷ್ಟಿಕತೆ ಹೆಚ್ಚಿರುವುದರಿಂದ 25 ರಿಂದ 30 ವರ್ಷದೊಳಗಿನ ಬಾಣಂತಿಯರ ಸಾವು ಆಗುತ್ತಿದೆ. ಆಸ್ಪತ್ರೆಗಳಲ್ಲಿ ಮಹಿಳಾ ಡಾಕ್ಟರಗಳ ಕೊರತೆ ಇದೆ. ಸರಕಾರಿ ಆಸ್ಪತ್ರೆಗಳಲ್ಲಿ ಸ್ವಚ್ಚತಾ ವ್ಯವಸ್ಥೆ ಸರಿಯಾಗಿ ಇಲ್ಲ. ನಾನು ಎಸ್.ಸಿ. ಎಸ್ಟಿ ಹಾಗೂ ಓಬಿಸಿ ಸೇರಿದಂತೆ ಹಲವಾರು ವಸತಿ ನಿಲಯಗಳಿಗೆ ಭೇಟಿ ನೀಡಿದ್ದೇನೆ. ಅಲ್ಲಿ ವ್ಯವಸ್ಥೆ ಇನ್ನೂ ಸರಿಯಾಗಿ ಆಗಬೇಕಿದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ನಲಿನ್ ಅತುಲ್ ಅವರು ಮಾತನಾಡಿ, ಹವಮಾನ ಬದಲಾವಣೆ ಕುರಿತ ಇಕೋ ಸಿಸ್ಟಮ್‌ಗೆ ಒತ್ತು ನೀಡಬೇಕಿದೆ. ಕೊಪ್ಪಳ ಜಿಲ್ಲೆಯಲ್ಲಿ ಕೃಷಿ, ತೋಟಗಾರಿಕೆ ಹಾಗೂ ಜಿಲ್ಲೆಯ ಪ್ರವಾಸೋದ್ಯಮ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ಜಿಲ್ಲೆಯಲ್ಲಿ ಪಿಯುಸಿ, ಉನ್ನತ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ ಕ್ಷೇತ್ರ ಇನ್ನೂ ಹೆಚ್ಚಿನ ಅಭಿವೃದ್ಧಿಯಾಗಬೇಕಿದೆ ಎಂದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಅವರು ಮಾತನಾಡಿ, ಕಲ್ಯಾಣ ಕರ್ನಾಟಕದ ಭಾಗದ ವಿವಿಧ ಇಲಾಖೆಗಳಲ್ಲಿ ಅಧಿಕಾರಿ, ಸಿಬ್ಬಂದಿಗಳ ಕೊರತೆಯಿದ್ದು, ಈ ಸಮಸ್ಯೆ ಸರಿಯಾಗಬೇಕು. ಈ ಭಾಗದಲ್ಲಿ ನೇಮಕವಾಗುವ ನೌಕರರು ಕನಿಷ್ಠ 2 ರಿಂದ 3 ವರ್ಷಗಳ ಕಾಲ ಸೇವೆ ಮಾಡುವಂತಾಗಬೇಕು ಹಾಗೂ ಈ ಭಾಗದ ಅಭಿವೃದ್ಧಿಗಾಗಿ ದೀರ್ಘಾವಧಿ ಯೋಜನೆಗಳ ಅವಶ್ಯಕತೆಯಿದೆ ಎಂದು ಹೇಳಿದರು.

ಮುಖಂಡರ ಸಲಹೆ: ಸಭೆಯಲ್ಲಿ ಪಾಲ್ಗೊಂಡಿದ್ದ ರೈತರು, ವಿವಿಧ ಸಂಘ ಸಂಸ್ಥೆಗಳ ಮುಖಂಡರು ಮಾತನಾಡಿ, ಜಿಲ್ಲೆಯಲ್ಲಿ ನೀರಾವರಿ ಪ್ರದೇಶ ವಿಸ್ತರಣೆಯಾಗಬೇಕು. ಕಲ್ಯಾಣ ಕರ್ನಾಟಕ ಭಾಗದಲ್ಲಿನ ಅಪೌಷ್ಠಿಕತೆ ನಿವಾರಣೆಗೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ತೋಟಗಾರಿಕೆ ಅಭಿವೃದ್ಧಿಗಾಗಿ ಉತ್ತರ ಕರ್ನಾಟಕದ ಭಾಗದ ರಫ್ತು ಕೇಂದ್ರವನ್ನು ಕೊಪ್ಪಳ ಜಿಲ್ಲೆಯಲ್ಲಿ ಆರಂಭಿಸಬೇಕು. ವಿವಿಧ ಯೋಜನೆಗಳಡಿ ಬಾಕಿ ಉಳಿಯುವ ಅನುದಾನವನ್ನು ಮುಂದಿನ ವರ್ಷದಲ್ಲಿ ಬಳಕೆಯಾಗಬೇಕು. ಪ್ರಾದೇಶಿಕ ವಿಭಾಗದ ಉಪ ಕಚೇರಿಯನ್ನು ಕೊಪ್ಪಳದಲ್ಲಿ ಪ್ರಾರಂಭಿಸಬೇಕು. ಜಿಲ್ಲೆಯಲ್ಲಿ ವಲಸೆ ತಡೆಗೆ ವಿಶೇಷ ಕ್ರಮ ಕೈಗೊಳ್ಳಬೇಕು. ಕೊಪ್ಪಳ ಜಿಲ್ಲೆಯಲ್ಲಿ ಶಿಕ್ಷಣ ಕ್ಷೇತ್ರದ ಅಭಿವೃದ್ಧಿ ಅತ್ಯವಶ್ಯಕವಾಗಿದೆ. ಇದಕ್ಕಾಗಿ ಯಾವುದೇ ರೀತಿಯ ಮೂಲ ಸೌಕರ್ಯಗಳ ಕೊರತೆಯಾಗದಂತೆ ನೋಡಿಕೊಳ್ಳಬೇಕು ಎಂದು ಸಲಹೆಗಳನ್ನು ನೀಡಿದರು.

ಸಭೆಯಲ್ಲಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತಾ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಡಿ.ಮಂಜುನಾಥ, ಕೃಷಿ ಇಲಾಖೆ ಜಂಟಿ ನಿರ್ದೇಶಕ ರುದ್ರೇಶಪ್ಪ ಟಿ.ಎಸ್., ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಲಿಂಗರಾಜು ಟಿ., ಪದವಿ ಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಜಗದೀಶ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಶ್ರೀಶೈಲ್ ಬಿರಾದರ, ಪಶು ಇಲಾಖೆ ಉಪನಿರ್ದೇಶಕ ಡಾ. ಪಿ.ಎಂ.ಮಲ್ಲಯ್ಯ, ಮುಖಂಡರಾದ ಯಂಕಣ್ಣ ಯರಾಶಿ, ದೇವೇಂದ್ರಪ್ಪ ಬಳೂಟಗಿ, ಶರಣಪ್ಪ ದೊಡ್ಡಮನಿ, ವಿರೇಶ ಸೇರಿದಂತೆ ಇತರೆ ರೈತ ಮುಖಂಡರು, ಜನಪ್ರತಿನಿಧಿಗಳು, ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ಪ್ರತಿ ಕುಟುಂಬವು 100 ದಿನಗಳ ನರೇಗಾ ಕೂಲಿ ಕೆಲಸ ನಿರ್ವಹಿಸಿ

## ಕೊಪ್ಪಳ ಜಿಲ್ಲಾ ಪಂಚಾಯತಿ ಸಿಇಒ ರಾಹುಲ್ ರತ್ನಂ ಪಾಂಡೆಯ ಹೇಳಿಕೆ

### ಲೇಬಗೇರಿ: ಕೆರೆ ಹೂಳೆತ್ತುವ, ಕೂಸಿನ ಮನೆ, ತೋಟಗಾರಿಕೆ ಹಾಗೂ ದತ್ತು ಗ್ರಾಮದ ಕಾಮಗಾರಿ ಪರಿಶೀಲನೆ



**■ ಹಂಪಿ ಟೈಮ್ಸ್ ಕೊಪ್ಪಳ**

ಪ್ರಸ್ತುತ ಬೇಸಿಗೆ ಇರುವದರಿಂದ ಪ್ರತಿಯೊಂದು ಕುಟುಂಬವು ಕೆರೆ ಹೂಳೆತ್ತುವ ಕಾಮಗಾರಿಯಲ್ಲಿ 100 ದಿನಗಳ ಕೂಲಿ ಕೆಲಸ ನಿರ್ವಹಿಸಿರೆಂದು ಕೊಪ್ಪಳ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ರಾಹುಲ್ ರತ್ನಂ ಪಾಂಡೆಯ ಕರೆ ನೀಡಿದರು.

ಅವರು ಸೋಮವಾರ ಲೇಬಗೇರಿ ಗ್ರಾಮ ಪಂಚಾಯತಿ ಯಿಂದ ಮಹಾತ್ಮಾ ಗಾಂಧಿ ನರೇಗಾ ಯೋಜನೆಯಡಿ ಲೇಬಗೇರಿ ಗ್ರಾಮದ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಭೇಟಿ ಪರಿಶೀಲಿಸಿ ಮಾತನಾಡಿದರು.

ಪ್ರತಿಯೊಬ್ಬರು ರೂ. 370 ಕೂಲಿ ಬರುವಂತೆ ಕೂಲಿ ಕೆಲಸ ನಿರ್ವಹಿಸಿ ಅಲ್ಲದೇ ಬೇಸಿಗೆ ಇರುವದರಿಂದ ಕೆಲಸದ ಪ್ರಮಾಣದಲ್ಲಿ ಶೇ.30ರಷ್ಟು ವಿನಾಯಿತಿ ನೀಡಲಾಗಿದೆ. ಕಳೆದ ಸಾಲಿನಲ್ಲಿ ರೂ. 349 ಇದ್ದ ಕೂಲಿಯನ್ನು ಪ್ರಸ್ತುತ ರೂ.370 ಕ್ಕೆ ಹೆಚ್ಚಿಸಿದ್ದು, ನಿಮಗೆ ನೀಡಿರುವ ಅಳತೆಗನುಗುಣವಾಗಿ ಕೆಲಸ ನಿರ್ವಹಿಸಬೇಕು. ಬಿಸಲಿನ ಪ್ರಮಾಣದ ಬಹಳಷ್ಟು ಇರುವದರಿಂದ ಕೂಲಿ ಕೆಲಸಕ್ಕೆ ಬರುವ ಎಲ್ಲಾ ಪಾಲಕರು ತಮ್ಮ 6 ತಿಂಗಳಿನಿಂದ 3 ವರ್ಷದೊಳಗಿ ಮಕ್ಕಳನ್ನು ಕಾಮಗಾರಿ ಸ್ಥಳಕ್ಕೆ ಕರೆದುಕೊಂಡು ಬರದೇ ಗ್ರಾಮದಲ್ಲಿರುವ ಕೂಸಿನ ಮನೆಗೆ ಮಕ್ಕಳನ್ನು ಸೇರ್ಪಡೆ ಮಾಡಬೇಕು. 6 ಪೂಟ್ ಉದ್ದ, 6 ಅಗಲ, 1 ಪೂಟ್ ಆಳ ಕೆಲಸ ನಿರ್ವಹಿಸಿದ ಪ್ರತಿಯೊಬ್ಬರಿಗೂ ರೂ. 370 ಕೂಲಿ ಬರುತ್ತದೆಂದರು.

ಮಹಿಳಾ ಕೂಲಿಕಾರರೊಂದಿಗೆ ಸಂವಾದ: ಕೆರೆ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಮಹಿಳಾ ಕೂಲಿಕಾರರೊಂದಿಗೆ ಜಿಲ್ಲಾ ಪಂಚಾಯತಿ ಸಿಇಒ ಸಂವಾದ ನಡೆಸಿ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿ ಕೆಲಸಕ್ಕೆ ಹಾಜರಾಗುವಂತೆ ತಿಳಿಸಿದರು. ಕೆರೆ ಕಾಮಗಾರಿಯಲ್ಲಿ ಕೆಲಸ ನಿರ್ವಹಿಸಿರುವ ಕುರಿತು ಎನ್‌ಎಂಆರ್ ಪರಿಶೀಲಿಸಿದರು.

ಕೂಸಿನ ಮನೆ ಪರಿವೀಕ್ಷಣೆ: ಗ್ರಾಮದಲ್ಲಿರುವ ಕೂಸಿನ ಮನೆಗೆ ಭೇಟಿ ನೀಡಿ ಮಕ್ಕಳು ದಾಖಲಾಗಿರುವ ಕುರಿತು ಕೇರ್ ಟೇಕರ್ಸ್‌ಗಳು ಮಾಹಿತಿ ನೀಡಿದರು. ಪ್ರಸ್ತುತ 12 ಮಕ್ಕಳು ಪ್ರತಿ ದಿನ ಕೂಸಿನ ಮನೆಗೆ ಬರುತ್ತಿದ್ದು ಬೆಳಿಗ್ಗೆ ಹಾಲು, ದಾಲ್ ಖಿಚಡಿ, ಮೊಟ್ಟೆ ನೀಡುತ್ತಿರುವ ಕುರಿತು ವಿವರಿಸಿದರು. ಅಲ್ಲಿರುವ ಮಕ್ಕಳ ಆರೋಗ್ಯ ತಪಾಸಣೆ ಜರುಗಿಸಬೇಕೆಂದರು. ಕೂಸಿನ ಮನೆ ಮಕ್ಕಳ ದಾಖಲಾತಿ ವಹಿ, ಆಹಾರ ದಾಸ್ತಾನು ವಿತರಣೆ ವಹಿಗಳನ್ನು ಸ್ವತಃ ಖುದ್ದಾಗಿ ಪರಿಶೀಲಿಸಿದರು.

ನರೇಗಾ ದತ್ತು ಗ್ರಾಮ ಕಾಮನೂರು ಭೇಟಿ: ಸಂಸದರ ನರೇಗಾ ದತ್ತು ಗ್ರಾಮ ಕಾಮನೂರು ಗ್ರಾಮಕ್ಕೆ ಭೇಟಿ ನೀಡಿ ನರೇಗಾ ಯೋಜನೆಯ ಸಂಜಿವಿನಿ ಸಂಘದ ಶೆಡ್ ಕಾಮಗಾರಿ, ಪಂಚಾಯತ್ ರಾಜ್ ಇಂಜನಿಯರಿಂಗ್ ಇಲಾಖೆಯಿಂದ ಅನುಷ್ಠಾನಿಸುತ್ತಿರುವ ಪ್ರಗತಿಯಲ್ಲಿರುವ ಸಿಸಿ ರಸ್ತೆ ಕಾಮಗಾರಿಗಳನ್ನು ಗ್ರಾಮದಲ್ಲಿ ಸಂಚರಿಸಿ ಖುದ್ದು ವೀಕ್ಷಿಸಿ ಕಾಮಗಾರಿ ಗುಣಮಟ್ಟದಿಂದ ಅನುಷ್ಠಾನವಾಗಬೇಕೆಂದು ಕಿರಿಯ ಅಭಿಯಂತರರಿಗೆ ಸೂಚಿಸಿದರು.

ಶೌಚಾಲಯ ಬಳಕೆ ಕುರಿತು ವೀಕ್ಷಣೆ: ಲೇಬಗೇರಿ ಹಾಗು ಕಾಮನೂರು ಗ್ರಾಮದಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡಿದ್ದು ಪ್ರತಿ ದಿನ ಬಳಕೆಯಾಗುತ್ತಿರುವ ಫಲಾನುಭವಿಗಳೊಂದಿಗೆ ಚರ್ಚಿಸಿದರು. ನಂತರ ಕಾಮನೂರು ಗ್ರಾಮದ ಕೆರೆ ಸ್ಥಳಕ್ಕೆ ಭೇಟಿ ನೀಡಿ ಕೆರೆಯನ್ನು ಇನ್ನಷ್ಟು ಅಭಿವೃದ್ಧಿಪಡಿಸಬೇಕೆಂಬ ಉದ್ದೇಶದಿಂದ ವಿವಿಧ ಯೋಜನೆಗಳ ಅನುದಾನದಿಂದ ಅಭಿವೃದ್ಧಿಪಡಿ ಸಲಾಗುವದು ಗ್ರಾಮಸ್ಥರಿಗೆ ತಿಳಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ ಯೋಜನಾ ನಿರ್ದೇಶಕ ಪ್ರಕಾಶ ವಡ್ಡರ್, ಕೊಪ್ಪಳ ತಾಲೂಕ ಪಂಚಾಯತ ನರೇಗಾ ಸಹಾಯಕ ನಿರ್ದೇಶಕ ಯಂಕಪ್ಪ, ಪಂಚಾಯತ ಅಭಿವೃದ್ಧಿ ಅಧಿಕಾರಿ ಸಂಗಮೇಶ ತೇರಿನ, ಜಿಲ್ಲಾ ಪಂಚಾಯತಿ ಎಡಿಪಿಸಿ ಮಹಾಂತಸ್ವಾಮಿ, ಜಿಲ್ಲಾ ಎಂಐಸ್ ಸಂಯೋಜಕ ಮೈನುದ್ದಿನ್, ತೋಟಗಾರಿಕೆ ಇಲಾಖೆ ಹೋಬಳಿ ಅಧಿಕಾರಿ ವಿಜಯ ಮಹಾಂತೇಶ ಹೊಟ್ಟಿನ, ತಾಲೂಕ ಐಇಸಿ ಸಂಯೋಜಕ ದೇವರಾಜ ಪತ್ತಾರ, ತಾಂತ್ರಿಕ ಸಂಯೋಜಕರಾದ ಯಮನೂರ, ಕವಿತಾ, ಗ್ರಾಮ ಪಂಚಾಯತ ಸದಸ್ಯರಾದ ನಾಗಪ್ಪ ದೊಡ್ಡಮನಿ, ಫಕೀರಗೌಡ, ಗ್ರಾಪಂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಏ.9 ರಂದು ಗಂಗಾವತಿಯಲ್ಲಿ ಲೋಕಾಯುಕ್ತರಿಂದ ಅಹವಾಲು ಸ್ವೀಕಾರ

**■ ಹಂಪಿ ಟೈಮ್ಸ್ ಕೊಪ್ಪಳ**

ಗೌರವಾನ್ವಿತ ಲೋಕಾಯುಕ್ತರು ಬೆಂಗಳೂರು ಹಾಗೂ ಅಪರ ಪೊಲೀಸ್ ಮಹಾನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ಅವರ ಆದೇಶದ ಮೇರೆಗೆ ಕೊಪ್ಪಳ ಲೋಕಾಯುಕ್ತ ಅಧಿಕಾರಿಗಳಿಂದ ಕಾರಟಗಿ ಮತ್ತು ಗಂಗಾವತಿ ತಾಲ್ಲೂಕಿನಲ್ಲಿ ಸಾರ್ವಜನಿಕರ ಕುಂದುಕೊರತೆಗಳ ಅಹವಾಲು ಸ್ವೀಕಾರಿಸಲು ಏಪ್ರಿಲ್ 9 ರಂದು ಬೆಳಿಗ್ಗೆ 11 ರಿಂದ ಮಧ್ಯಾಹ್ನ 1.30 ಗಂಟೆಯವರೆಗೆ ಗಂಗಾವತಿ ತಾಲ್ಲೂಕು ಪಂಚಾಯತ್ ಮಂಥನಹಾಲ್ ಸಭಾಂಗಣದಲ್ಲಿ ಅಹವಾಲು ಸ್ವೀಕಾರ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಕಾರಟಗಿ ಮತ್ತು ಗಂಗಾವತಿ ತಾಲ್ಲೂಕುಗಳ ವ್ಯಾಪ್ತಿಯ ಸಾರ್ವಜನಿಕರಲ್ಲಿ ಯಾರಿಗಾದರೂ ಸರ್ಕಾರಿ ಅಧಿಕಾರಿಗಳಿಂದ ತಮಗೆ ಆಗಬೇಕಾದ ಕೆಲಸಗಳಲ್ಲಿ ವಿಳಂಬವಾಗಿದ್ದರೆ, ಅಥವಾ ಅಧಿಕಾರಿಗಳು ನ್ಯಾಯಯುತವಾಗಿ ಮಾಡಿಕೊಡಬೇಕಾದ ಕೆಲಸಗಳಲ್ಲಿ ವೃಥಾ ತೊಂದರೆ ಕೊಡುತ್ತಿದ್ದರೆ ಅಥವಾ ಲಂಚ ಕೇಳುವುದು ಇತ್ಯಾದಿ ದುರಾಡಳಿತದಲ್ಲಿ ತೊಡಗಿದ್ದರೆ, ಈ ಕುರಿತು ದೂರು ಸ್ವೀಕರಿಸಲು ಲೋಕಾಯುಕ್ತರಿಂದ ಸಾರ್ವಜನಿಕ ಕುಂದುಕೊರತೆಗಳ ಅಹವಾಲು ಸ್ವೀಕರಿಸುವ ಕಾರ್ಯಕ್ರಮ ಹಾಗೂ ತಾಲ್ಲೂಕ ಮಟ್ಟದ ಅಧಿಕಾರಿಗಳ ಸಭೆ ನೆಡೆಸಲು ತೀರ್ಮಾನ ಮಾಡಲಾಗಿದೆ. ಈ ಸಭೆಯಲ್ಲಿ ಲೋಕಾಯುಕ್ತ ಅಧಿಕಾರಿಗಳು ಎಲ್ಲಾ ಇಲಾಖೆಯ ತಾಲ್ಲೂಕ ಮಟ್ಟದ ಅಧಿಕಾರಿಗಳೊಂದಿಗೆ ಸಭೆ ನಡೆಸಲಿದ್ದಾರೆ. ಸಾರ್ವಜನಿಕರು ತಮ್ಮ ಕುಂದುಕೊರತೆಗಳನ್ನು ನೇರವಾಗಿ ಬಂದು ಸಲ್ಲಿಸಲು ಹಾಗೂ ಸ್ಥಳದಲ್ಲಿಯೇ ಇದ್ದ ಅಧಿಕಾರಿಗಳೊಂದಿಗೆ ಕೆಲಸ ನೆರವೇರಿಸಿಕೊಳ್ಳಲು ಅಥವಾ ಸ್ಥಳದಲ್ಲಿಯೇ ದೂರು ಅರ್ಜಿಯ ಫಾರಂ ನಂ: 1 & 2 ತೆಗೆದುಕೊಂಡು ದೂರು ನೀಡಲು ಅನುಕೂಲ ಕಲ್ಪಿಸಲಾಗಿದ್ದು, ಈ ಎರಡು ತಾಲ್ಲೂಕಿನ ಸಾರ್ವಜನಿಕರು ಈ ಸಭೆಯ ಸದುಪಯೋಗ ಪಡೆದುಕೊಳ್ಳಲು ಈ ಮೂಲಕ ತಿಳಿಸಲಾಗಿದೆ.


ಹೆಚ್ಚಿನ ಮಾಹಿತಿಗಾಗಿ ಮೊಬೈಲ್ ಸಂಖ್ಯೆ: 9364062699, 9364062700, 9364062701, 9364062702 ಹಾಗೂ 9364062703 ಗೆ ಸಂಪರ್ಕಿಸಬಹುದು ಎಂದು ಕರ್ನಾಟಕ ಲೋಕಾಯುಕ್ತ ಕೊಪ್ಪಳ ಪೊಲೀಸ್ ಉಪಾಧೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿತ್ಯ ಪಂಚಾಂಗ

ಮಾಸ: ಚೈತ್ರ । ಸಂವತ್ಸರ: ವಿಶ್ವಾವಸು

**09-04-2025 - ಬುಧವಾರ**

| | |
|---|---|
| ತಿಥಿ | : ದ್ವಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮಾಘಾ |
| ಯೋಗ | : ಗಂಡ |
| ಕರಣ | : ಭವ |
| ಸೂರ್ಯೋದಯ | : 06:12:55 |
| ಸೂರ್ಯಾಸ್ತ | : 18:44:16 |
| ರಾಹು ಕಾಲ | : 12:29-14:03 |
| ಯಮಘಂಡ ಕಾಲ | : 07:47-09:21 |
| ಗುಳಿಕ ಕಾಲ | : 10:55-12:29 |



## ತುಂಗಭದ್ರಾ ನೀರಿನ ಮಟ್ಟ

ಮಂಗಳವಾರ : 08-04-2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1584.98 ಅಡಿ |
| ಒಳ ಹರಿವು | 5215 ಕ್ಯುಸೆಕ್ |
| ಹೊರ ಹರಿವು | 4202 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 7.310 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| ಕಳೆದ ವರ್ಷ ಇದೇ ದಿನ | |
| ಇಂದಿನ ಮಟ್ಟ | 1579.25 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 931 ಕ್ಯುಸೆಕ್ |
| ಸಾಮರ್ಥ್ಯ | 4.117 ಟಿಎಂಸಿ |

ವಿಶೇಷ ಲೇಖನ, ಸುದ್ದಿಗಳನ್ನು
ಇ-ಪೇಪರ್‌ನಲ್ಲೂ ಓದಲು
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

# ಬೃಹತ್ ಉದ್ಯೋಗ ಮೇಳ

■ **ಹಂಪಿ ಟೈಮ್ಸ್ ರಾಯಚೂರು**

ಕಲಬುರಗಿ ನಗರದ ಕೆ.ಸಿ.ಟಿ. ಇಂಜಿನಿಯರಿಂಗ್ ಕಾಲೇಜಿನ ಆವರಣದಲ್ಲಿ ಏಪ್ರಿಲ್ 16 ರಂದು ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳ ಆಯೋಜಿಸಲಾಗಿದ್ದು, ಜಿಲ್ಲೆಯ ನಿರುದ್ಯೋಗ ಯುವಕ-ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಇದರ ಲಾಭ ಪಡೆಯುವಂತೆ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ತುಕಾರಾಂ ಪಾಂಡ್ವೆ ಅವರು ಮನವಿ ಮಾಡಿದರು.

ಏಪ್ರೀಲ್ 08ರ ಮಂಗಳವಾರ ದಂದು ನಗರದ ಜಿಲ್ಲಾ ಪಂಚಾಯತಿಯ ಜಲ ನಿರ್ಮಲ ಸಭಾಂಗಣದಲ್ಲಿ ನಡೆದ ಕಲಬುರಗಿ ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ನಿರುದ್ಯೋಗ ನಿವಾರಣೆ ನಿಟ್ಟಿನಲ್ಲಿ ಕೌಶಲ್ಯಾಭಿವೃದ್ಧಿ ಇಲಾಖೆಯು ನಿರಂತರವಾಗಿ ಈ ರೀತಿಯ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗುತ್ತಿದೆ. ರಾಜ್ಯದ ಬೇರೆ, ಬೇರೆ ಭಾಗಗಳಲ್ಲಿ ಉದ್ಯೋಗ ಮೇಳವನ್ನು ಆಯೋಜಿಸಲಾಗಿದೆ. ವೃತ್ತಿಪರ ಕೌಶಲ್ಯ ಹೆಚ್ಚಿಸಲು ನಿರಂತರ ತರಬೇತಿ, ಕಾರ್ಯಾಗಾರ ಸಹ ಆಯೋಜಿಸಲಾಗುತ್ತಿದೆ. ಕಲ್ಯಾಣ ಕರ್ನಾಟಕ ಭಾಗದ ಯುವಕರಿಗೆ ಕಾಲೇಜುವಾರು ಕಾರ್ಯಾಗಾರ ಆಯೋಜಿಸಿದ್ದು, ಇದರ ಲಾಭ ನಿರುದ್ಯೋಗಿ ಸಮುದಾಯದ ಅರ್ಹ ಫಲಾನುಭವಿಗಳು ಪಡೆಯಬೇಕು ಎಂದರು.

22 ಸಾವಿರ ಅಭ್ಯರ್ಥಿಗಳು ಭಾಗವಹಿಸುವ ನಿರೀಕ್ಷೆ: ಬೆಂಗಳೂರಿನ 125 ಸೇರಿದಂತೆ ಹೈದರಾಬಾದ್, ಮುಂಬೈ ಹಾಗೂ ಸ್ಥಳೀಯ ಸುಮಾರು 216 ಕಂಪನಿಗಳು ಈಗಾಗಲೆ ಮೇಳದಲ್ಲಿ ಭಾಗವಹಿಸಲು ನೋಂದಣಿ ಮಾಡಿಕೊಂಡಿವೆ. ಇದುವರೆಗೆ ಸುಮಾರು 7 ಸಾವಿರ ಅಭ್ಯರ್ಥಿಗಳು ಸಹ ನೋಂದಣಿ ಮಾಡಿದ್ದು, ಕಲಬುರಗಿ ವಿಭಾಗ ಮಟ್ಟದ ಉದ್ಯೋಗ ಮೇಳದಲ್ಲಿ ಒಟ್ಟು ಸುಮಾರು 22 ಸಾವಿರ ಅಭ್ಯರ್ಥಿಗಳು ಭಾಗವಹಿಸುವ ನಿರೀಕ್ಷೆ ಹೊಂದಲಾಗಿದೆ ಕೌಶಲ್ಯಾಭಿವೃದ್ಧಿ ಅಧಿಕಾರಿಗಳು ಸಭೆಗೆ ಮಾಹಿತಿ ನೀಡಿದರು.

ನೋಂದಣಿ ಪ್ರಕ್ರಿಯೆ ನಿರಂತರವಾಗಿ ನಡೆಯಲಿದ್ದು, ಆನ್‌ಲೈನ್ ಮೂಲಕ https://skillconnect.kaushalkar.com ನೊಂದಾಯಿಸಿಕೊಂಡು ಅಥವಾ ಅಂದೇ ನೇರವಾಗಿಯೂ ಮೇಳದಲ್ಲಿ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ ಎಂದರು.

ಸಚಿವರಿಂದ ಪೋಸ್ಟರ್ ಬಿಡುಗಡೆ: ಇದೇ ಏಪ್ರೀಲ್ 16ರಂದು ಕಲಬುರಗಿಯಲ್ಲಿ ವಿಭಾಗ ಮಟ್ಟದ ಬೃಹತ್ ಉದ್ಯೋಗ ಮೇಳದ ಅಂಗವಾಗಿ ಏ.07ರ ಸೋಮವಾರ ದಂದು ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಕೊಡಗು ಜಿಲ್ಲಾ ಉಸ್ತುವಾರಿ ಸಚಿವರಾದ ಎನ್.ಎಸ್.ಭೋಸರಾಜು ಅವರು ಉದ್ಯೋಗ ಮೇಳದ ಪೋಸ್ಟರ್ ಬಿಡುಗಡೆ ಮಾಡಿದರು. ಈ ವೇಳೆ ಮಹಿಳಾ ಮುಖಂಡರಾದ ಶ್ರೀಮತಿ ನಿರ್ಮಲ ಬೆಣ್ಣೆ ಸೇರಿದಂತೆ ಇತರರು ಇದ್ದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶಶಿಕಾಂತ್ ಶಿವಪೂರೆ, ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿಗಳಾದ ಡಾ.ಟಿ.ರೋಣಿ, ಜಿಲ್ಲಾ ಪಂಚಾಯತ್ ಯೋಜನಾ ನಿರ್ದೇಶಕರಾದ ಶರಣಬಸವ ಕೆಸರಟ್ಟಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಜಿ.ಯು.ಹುಡೇದ್, ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜಶೇಖರ ಪಾಟೀಲ್, ಕೃಷಿ ಇಲಾಖೆಯ ಜಂಟಿ ನಿರ್ದೇಶಕರಾದ ಜಯಪ್ರಕಾಶ್,ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ತರಬೇತಿ ಅಧಿಕಾರಿ ಸದಾಶಿವಪ್ಪ ಸೇರಿದಂತೆ ಇತರರು ಇದ್ದರು.

# ಕಿವುಡು ಮಕ್ಕಳ ವಸತಿ ಶಾಲಾ ದಾಖಲಾತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಕಂಟೋನ್‌ಮೆಂಟ್‌ನ ಶಾಂತಿಧಾಮ ಆವರಣದ ಸರ್ಕಾರಿ ಕಿವುಡು ಮತ್ತು ಮೂಕ ಮಕ್ಕಳ ಪಾಠಶಾಲೆಯಲ್ಲಿ 1ನೇ ತರಗತಿಯಿಂದ 08 ನೇ ತರಗತಿಯವರೆಗೆ ದಾಖಲಾತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಸರ್ಕಾರಿ ಕಿವುಡು ಮಕ್ಕಳ ಶಾಲೆಯ ಅಧೀಕ್ಷಕ ಹೆಚ್.ಗೋವಿಂದಪ್ಪ ಅವರು ತಿಳಿಸಿದ್ದಾರೆ.

ಈ ಶಾಲೆಯಲ್ಲಿ ಕಿವುಡು ಮತ್ತು ಮೂಕ ಬಾಲಕರಿಗೆ ಉಚಿತವಾಗಿ ವಿಶೇಷ ಶಿಕ್ಷಣವನ್ನು ನೀಡಲಾಗುತ್ತಿದ್ದು, 6 ವರ್ಷದಿಂದ 14 ವರ್ಷದ ಶ್ರವಣದೋಷ ಮಕ್ಕಳು ದಾಖಲಾತಿ ಪಡೆಯಬಹುದು.

ಶಾಲೆಯಲ್ಲಿ ಮಕ್ಕಳಿಗೆ ಉಚಿತವಾಗಿ ಊಟ ಮತ್ತು ವಸತಿ, ಪಠ್ಯ ಪುಸ್ತಕ, ಸಮವಸ್ತ್ರ ಸೌಲಭ್ಯಗಳೊಂದಿಗೆ ಮಾತಿನ ತರಬೇತಿ, ಶ್ರವಣ ತರಬೇತಿ, ಭಾಷೆ ಕಲಿಕೆ, ಕಂಪ್ಯೂಟರ್ ತರಗತಿ, ಸ್ಮಾರ್ಟ್ ಕ್ಲಾಸ್, ಸೈನ್ಸ್ ಲ್ಯಾಬ್, ವಿಶೇಷ ಶಿಕ್ಷಕರಿಂದ ವಿಷಯ ಭೋದನೆ, ಮಾರ್ಚ್‌ಫಸ್ಟ್, ಸಾಮೂಹಿಕ ನೃತ್ಯ, ಕ್ರೀಡೆ ಹಾಗೂ ಸಹಪಠ್ಯ ಚಟುವಟಿಕೆಗಳನ್ನು ಕಲಿಸಿಕೊಡಲಾಗುತ್ತದೆ.

ಶಾಲೆಗೆ ಶ್ರವಣದೋಷ ಮಕ್ಕಳನ್ನು ದಾಖಲಿಸಲು ಇಚ್ಛಿಸುವ ತಂದೆ, ತಾಯಿ ಮತ್ತು ಪೋಷಕರು ಅಗತ್ಯದಾಖಲೆ ಸಲ್ಲಿಸಿ ಪ್ರವೇಶಾತಿ ಪಡೆಯಬಹುದು.

ಬೇಕಾದ ದಾಖಲೆಗಳು:

ಶಾಲೆ ಪ್ರವೇಶ ಅರ್ಜಿ (ಉಚಿತವಾಗಿ ನೀಡಲಾಗುವುದು), ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಜನ್ಮ ದಿನಾಂಕ ಪ್ರಮಾಣ ಪತ್ರ, ತಂದೆ ಮತ್ತು ತಾಯಿಯ ಆಧಾರ್ ಕಾರ್ಡ್ ಪ್ರತಿ, ವಿದ್ಯಾರ್ಥಿಯ ಆಧಾರ್ ಕಾರ್ಡ್, ಅಂಗವಿಕಲ ಪ್ರಮಾಣ ಪತ್ರ, ಯುಡಿಐಡಿ ಕಾರ್ಡ್ ಮತ್ತು ಬ್ಯಾಂಕ್ ಪಾಸ್ ಪುಸ್ತಕ ಸೇರಿದಂತೆ ಇತರೆ ದೃಢೀಕೃತ ದಾಖಲಾತಿಗಳನ್ನು ಅರ್ಜಿಯೊಂದಿಗೆ ಲಗತ್ತಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸರ್ಕಾರಿ ಕಿವುಡು ಮಕ್ಕಳ ಪಾಠಶಾಲೆಯ ಅಧೀಕ್ಷಕರ ಕಚೇರಿ ಅಥವಾ ದೂ.08392-297138 ಹಾಗೂ ಮೊ.9008485380, ಮೊ.9902106670 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

# ಪಿಯುಸಿ ವಿದ್ಯಾರ್ಥಿಗಳಿಗೆ ಕನ್ನಡ ರತ್ನ ಪ್ರಶಸ್ತಿಗೆ ಅರ್ಜಿ ಆಹ್ವಾನ

■ **ಹಂಪಿ ಟೈಮ್ಸ್ ಹರಪನಹಳ್ಳಿ**

ನವಜ್ಯೋತಿ ಸಾಂಸ್ಕೃತಿಕ ಸೇವಾ ಸಂಸ್ಥೆ ಕಳೆದ 27 ವರ್ಷಗಳಿಂದ ಸಮಾಜಿಕ ಮತ್ತು ಕನ್ನಡದ ಕೈಂಕರ್ಯಗಳನ್ನು ಮಾಡುತ್ತಾ ಬಂದಿದೆ, ಕನ್ನಡ ನಾಡು-ನುಡಿ ಬೆಳವಣಿಗೆ ಮತ್ತು ವಿದ್ಯಾರ್ಥಿಗಳಲ್ಲಿ ಕನ್ನಡದ ಅಭಿಮಾನ ಆಸಕ್ತಿ ಮೂಡಿಸುವ ಉದ್ದೇಶದಿಂದ 2024-25 ನೇ ಸಾಲಿನ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆ-1ರಲ್ಲಿ ಉತ್ತೀರ್ಣರಾಗಿ ಕನ್ನಡ ವಿಷಯದಲ್ಲಿ 100 ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ರಾಜ್ಯಮಟ್ಟದ "ಕನ್ನಡ ರತ್ನ" ಹಾಗೂ 95 ರಿಂದ 99 ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ "ಕನ್ನಡ ರತ್ನ" ಪ್ರಶಸ್ತಿ ನೀಡಿ ಗೌರವಿಸಲು ಅರ್ಜಿಯನ್ನು ಆಹ್ವಾನಿಸಲಾಗಿದೆ. ಜಿಲ್ಲಾ ಮಟ್ಟದ ಪ್ರಶಸ್ತಿಗೆ ವಿಜಯನಗರ ಜಿಲ್ಲೆಯವರಿಗೆ ಮಾತ್ರ ಅವಕಾಶವಿರುತ್ತದೆ. ಆಸಕ್ತ ವಿದ್ಯಾರ್ಥಿಗಳು ಏ.9 ರಿಂದ ಏ.26 ರೊಳಗೆ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ಅರ್ಜಿಯನ್ನು ಸಲ್ಲಿಸಲು ತಿಳಿಸಲಾಗಿದೆ. ಅರ್ಜಿಯನ್ನು ಪಡೆಯುವ ಮತ್ತು ಸಲ್ಲಿಸುವ ವಿಳಾಸ ಹೆಚ್.ಮಲ್ಲಿಕಾರ್ಜುನ ಕನ್ನಡ ಉಪನ್ಯಾಸಕರು, ಗೊರವಿನ ತೋಟ, ಗ್ಯಾಸ್ ಏಜೆನ್ಸಿ ಹತ್ತಿರ, ಹರಪನಹಳ್ಳಿ. ಹೆಚ್ಚಿನ ಮಾಹಿತಿಗಾಗಿ, 6363240473 ಮತ್ತು 7899219343 ಸಂಪರ್ಕಿಸಬಹುದು.

# ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ : ಆಕ್ಷೇಪಣೆ ಸಲ್ಲಿಸಲು ಅವಕಾಶ

■ **ಹಂಪಿ ಟೈಮ್ಸ್ ಬಳ್ಳಾರಿ**

ಬಳ್ಳಾರಿ(ನಗರ) ಶಿಶು ಅಭಿವೃದ್ಧಿ ಯೋಜನಾ ವ್ಯಾಪ್ತಿಯಲ್ಲಿ ಖಾಲಿ ಇರುವ ಒಟ್ಟು 64 ಅಂಗನವಾಡಿ ಸಹಾಯಕಿಯರ ಆಯ್ಕೆಗಾಗಿ ಆಧಿಸೂಚನೆ ಹೊರಡಿಸಲಾಗಿದ್ದು, ಈಗಾಗಲೇ ತಾತ್ಕಾಲಿಕವಾಗಿ ಆಯ್ಕೆಗೊಂಡ ಅಂಗನವಾಡಿ ಸಹಾಯಕಿಯರ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟಿಸಲಾಗಿದೆ. ಆಯ್ಕೆ ಪಟ್ಟಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ ಸಲ್ಲಿಸಬಹುದು ಎಂದು ಬಳ್ಳಾರಿ ನಗರ ಶಿಶು ಅಭಿವೃದ್ಧಿ ಯೋಜನಾಧಿಕಾರಿ ತಿಳಿಸಿದ್ದಾರೆ.

ತಾತ್ಕಾಲಿಕ ಆಯ್ಕೆ ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು ಏ.22 (ರಜೆ ದಿನಗಳನ್ನು ಹೊರತುಪಡಿಸಿ) ರಂದು ಮಧ್ಯಾಹ್ನ 1.30 ರ ವರೆಗೆ ಸಂಬಂಧಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿಗಳಿಗೆ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.08392-268609 ಗೆ ಸಂಪರ್ಕಿಸಬಹುದು ಎಂದು ತಿಳಿಸಿದ್ದಾರೆ.

14 ಭಾಷೆಗಳಲ್ಲಿ
ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ
ಸುದ್ದಿ, ಲೇಖನ ಓದಿರಿ...
www.hampitimes.com

